# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026



ಓದುಗರ ಬೆರಳ ತುದಿಗೆ ನಿಮ್ಮ ಬ್ರಾಂಡ್, ನಿಮ್ಮ ವ್ಯವಹಾರ, ಸೇವೆ/ವಿಶೇಷ ಕೊಡುಗೆಗಳನ್ನು ಹಂಪಿ ಟೈಮ್ಸ್ ಮೂಲಕ ಹೆಚ್ಚು ಓದುಗರಿಗೆ ತಲುಪಿಸಿ.



1,10,000+ Digital E-PAPER READERS

No.1 HAMPI TIMES LEADING VIJAYANAGARA District News Paper

Contact for Advertisements: 9448633038



ಸಂಪುಟ:02 • ಸಂಚಿಕೆ: 198 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 08.02.2025 • ಶನಿವಾರ • ಪುಟ:04 • ಬೆಲೆ:2

Volume:02 • Issue: 198 • PRGI No:KARKAN/2023/88055 • VIJAYANAGARA • 08.02.2025 • Saturday • Page:04 • Rs:2


ತಪ್ಪದೇ ಕರೆಮಾಡಿ ಪ್ರಶ್ನೆ ಕೇಳಿ | ಎಸ್ಸೆಸ್ಸೆಲ್ಸಿ ಪೂರ್ವಸಿದ್ಧತಾ ಪರೀಕ್ಷೆ ಹಾಗೂ ವಾರ್ಷಿಕ ಪರೀಕ್ಷೆಗೆ ಸನ್ನದ್ಧರಾಗಲು ಸುವರ್ಣಾವಕಾಶ

# ನಾಳೆ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗಾಗಿ ಫೋನ್ ಇನ್ ಕಾರ್ಯಕ್ರಮ

**ಕನ್ನಡ ವಿಷಯಕ್ಕೆ ಮೊ: 9880019171/7892989253, ಇಂಗ್ಲೀಷ್: 83173 63832/ 9901735338, ಹಿಂದಿ: 9845400842 / 9886500568, ಸಮಾಜ ವಿಜ್ಞಾನ: 9964036271/ 8660953524, ವಿಜ್ಞಾನ: 9945118741/ 94490 20826, ಗಣಿತ: 7892441428/ 8884816581 ಗೆ ಕರೆಮಾಡಿ**

**ಹಂಪಿ ಟೈಮ್ಸ್ ಹೊಸಪೇಟೆ**

ನಳದೊಳಗಿನ ಸಿಲುಕಿಕೊಂಡಿರುವ ಕಸಕಡ್ಡಿ ತೆಗೆದಾಗ ನೀರು ರಭಸವಾಗಿ ಹರಿಯುತ್ತದೆ ಎಂಬತೆ ವಿದ್ಯಾರ್ಥಿಗಳಲ್ಲಿ ಕಾಡುವ ಕೆಲ ವಿಷಯಗಳ ಗೊಂದಲಗಳು ಮತ್ತು ಪರೀಕ್ಷೆ ಹೇಗಿರುತ್ತದೆ ಎಂಬುದು ಸೇರಿದಂತೆ ನಾನಾ ಗೊಂದಲಗಳಿಗೆ ಪರಿಹಾರ ಸೂಚಿಸಿದರೆ, ವಿದ್ಯಾರ್ಥಿಗಳು ತಮ್ಮ ನಿರೀಕ್ಷಿತ ಗುರಿ ತಲುಪಲು ಸಹಕಾರಿಯಾಗಲೆಂದು ಹಂಪಿ ಟೈಮ್ಸ್ ದಿನಪತ್ರಿಕೆ, ಹೊಸಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿ ಕಾರ್ಯಾಲಯದ ಸಹಕಾರದೊಂದಿಗೆ ಫೆ.9 ರಂದು ಬೆಳಿಗ್ಗೆ 11 ರಿಂದ 12ರವರೆಗೆ ಫೋನ್ ಇನ್ ಕಾರ್ಯಕ್ರಮ ಹಮ್ಮಿಕೊಂಡಿದೆ. ವಿದ್ಯಾರ್ಥಿಗಳು ಕರೆ ಮಾಡಿ ನಿಮ್ಮ ಗೊಂದಲಗಳಿಗೆ ಪರಿಹಾರ ಕಂಡುಕೊಂಡಲ್ಲಿ ಹೆಚ್ಚಿನ ಅಂಕ ಗಳಿಸಲು ಸಹಕಾರಿಯಾಗಲಿದೆ. ವಿದ್ಯಾರ್ಥಿಗಳು ಈ ಸುವರ್ಣಾವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಹಂಪಿ ಟೈಮ್ಸ್ ಸಂಪಾದಕ ಬಸಾಪುರ ಬಸವರಾಜ ಕೋರಿದ್ದಾರೆ.

ಹಂಪಿ ಟೈಮ್ಸ್ ದಿನಪತ್ರಿಕೆಯು ಈ ಬಾರಿಯ ಶೈಕ್ಷಣಿಕ ವರ್ಷದ ಆರಂಭದಿಂದಲೂ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳಿಸಲು ಅನುಕೂಲ ವಾಗಲೆಂದು ತಜ್ಞ ಆರು ವಿಷಯ ಶಿಕ್ಷಕರ ನೆರವಿನೊಂದಿಗೆ ಕಳೆದ ಎಂಟು ತಿಂಗಳಿಂದ ಪ್ರತಿದಿನ ದಿನಕ್ಕೊಂದು ವಿಷಯದಂತೆ ಆರು ವಿಷಯಗಳ ಪ್ರಶ್ನೋತ್ತರ ಸರಣಿ ಪ್ರಕಟಿಸುತ್ತಾ ಬಂದಿದೆ. ಜಿಲ್ಲೆ ಸೇರಿದಂತೆ ನಾಡಿನ ವಿವಿಧ ಜಿಲ್ಲೆಗಳಲ್ಲೂ ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿ ಪ್ರಕಟಗೊಂಡ ಪಠ್ಯಾಧಾರಿತ ಪ್ರಶ್ನೋತ್ತರಗಳನ್ನೇ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ ಎನ್ನುವುದು ಹೆಮ್ಮೆಯ ಸಂಗತಿ. ನಾಡಿನುದ್ದಕ್ಕೂ ಅನೇಕ ಶಿಕ್ಷಕರು ಪ್ರಶ್ನೋತ್ತರಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಮಕ್ಕಳಲ್ಲಿ ಕಲಿಕೆಯ ಉತ್ಸುಕತೆಯನ್ನೂ ಹೆಚ್ಚಿಸಿದೆ. ವಾರ್ಷಿಕ ಪರೀಕ್ಷೆಗೆ ಬರುವ ಸಂಭವನೀಯ ವಿಜ್ಞಾನ ಚಿತ್ರಗಳನ್ನು ಬರೆಯಲು 11 ವಾರಗಳಿಂದ ಚಿತ್ರಸ್ಪರ್ಧೆ ಏರ್ಪಡಿಸಿದ್ದರ ಪರಿಣಾಮ ಮಕ್ಕಳಲ್ಲಿ ವಿಜ್ಞಾನದ ಆಸಕ್ತಿಯೂ ಇಮ್ಮಡಿಗೊಂಡಿದೆ. ನಿತ್ಯ ಬರೆದು ಓದುತ್ತಿರುವ ವಿದ್ಯಾರ್ಥಿಗಳ ಬರವಣಿಗೆಯೂ ಸುಧಾರಣೆಯಾಗಿದೆ ಎಂದು ಸ್ವತಃ ವಿದ್ಯಾರ್ಥಿಗಳೇ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ. ಕಡಿಮೆ ಸಮಯದಲ್ಲಿ ಹೆಚ್ಚು ಬಾರಿ ಓದಲು ಅವಕಾಶ ನಿಮ್ಮದಾಗಿದೆ. ಹಂಪಿ ಟೈಮ್ಸ್ ಮಾರ್ಗದರ್ಶಿಯನ್ನು ವಿದ್ಯಾರ್ಥಿಗಳು ಸೇರಿದಂತೆ ವಯೋ ಆಧಾರಿತ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯುವವರಿಗೂ ಅತ್ಯಂತ ಉಪಯುಕ್ತವಾಗಿದೆ ಎಂಬುದು ಶಿಕ್ಷಕರ ಅಭಿಪ್ರಾಯವಾಗಿದೆ.

**ರಾಜ್ಯಮಟ್ಟದ ಎಸ್ಸೆಸ್ಸೆಲ್ಸಿ ಪೂರ್ವಸಿದ್ಧತಾ ಪರೀಕ್ಷಾ ವೇಳಾಪಟ್ಟಿ ಪ್ರಕಟ**

ಫೆ.25ರಂದು ಕನ್ನಡ(ಪ್ರ.ಭಾ), ಫೆ.27–ಗಣಿತ, ಫೆ.28–ಇಂಗ್ಲೀಷ್(ದ್ವಿ.ಭಾ), ಮಾ.1–ಹಿಂದಿ, ಮಾ.3– ವಿಜ್ಞಾನ, ಮಾ.4 ರಂದು ಸಮಾಜ ವಿಜ್ಞಾನ ಪರೀಕ್ಷೆ ನಡೆಯಲಿವೆ.


**ಹಂಪಿ ಟೈಮ್ಸ್** ವಿಜಯನಗರದ ಹೆಮ್ಮೆ ಕನ್ನಡ ದಿನಪತ್ರಿಕೆ

**SSLC ವಿದ್ಯಾರ್ಥಿಗಳಿಗಾಗಿ**

ಗಣಿತ ಪಾಸಾಗಲು ಸುಲಭ ಅಂಶಗಳು ನಿಮ್ಮ ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿ

scan to read epaper

ನಿಮ್ಮ ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿ ಇನ್ಸ್ಟಾಲ್ ಮಾಡಿಕೊಳ್ಳಿ!




ಫೋನ್ ಇನ್ ಕಾರ್ಯಕ್ರಮದಲ್ಲಿ ಕರೆ ಸಿಗಲಿಲ್ಲ ಎಂಬ ಕೊರಗು ದೂರಾಗಿಸಲು ಎಸ್ಸೆಸ್ಸೆಲ್ಸಿ ಆರು ವಿಷಯಗಳಿಗೆ 12 ತಜ್ಞ ಶಿಕ್ಷಕರನ್ನು ನಿಯೋಜಿಸಿ, 12 ನಂಬರ್‌ಗಳನ್ನು ನೀಡಲಾಗಿದೆ. ನಿಗಧಿತ ಸಮಯದೊಳಗೆ ವಿದ್ಯಾರ್ಥಿಗಳು/ಪಾಲಕರು ಕರೆಮಾಡಬಹುದು. ಕೇಳಬೇಕಾದ ಪ್ರಶ್ನೆಗಳನ್ನು ಸ್ಪಷ್ಟವಾಗಿ ಬರೆದಿಟ್ಟುಕೊಂಡು ನಂತರ ಕರೆ ಮಾಡಬೇಕು.

– ಎಂ.ಚನ್ನಬಸಪ್ಪ ಬಿಇಒ, ಹೊಸಪೇಟೆ



ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ಗರಿಷ್ಠ ಅಂಕ ಪಡೆಯುವೆ ಎಂದು ಒಮ್ಮೆ ಭಾವಿಸಿಕೊಳ್ಳಿ, ಆಗ ನಿಮಗೆ ಎದುರಾಗುವ ಪ್ರಶ್ನೆಗಳನ್ನು ಮೊದಲು ಪಟ್ಟಿ ಮಾಡಿ ಇಟ್ಟುಕೊಂಡು ಪ್ರಶ್ನೆಗಳನ್ನು ಕೇಳಿರಿ. ಗೊಂದಲಗಳಗಳಿಗೆ ವಿಷಯ ತಜ್ಞರಿಂದ ಪರಿಹರಿಸಿಕೊಂಡರೆ ಗರಿಷ್ಠ ಅಂಕ ಗಳಿಸಲು ಸಾಧ್ಯವಾಗಲಿದೆ.

– ಬಸಾಪುರ ಬಸವರಾಜ, ಸಂಪಾದಕ, ಹಂಪಿ ಟೈಮ್ಸ್


## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ


–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಮನೆ ಬಾಡಿಗೆಗೆ ಇದೆ

ಹೊಸಪೇಟೆಯ ವಿವೇಕಾನಂದನಗರದಲ್ಲಿ ಶ್ರೀನಿವಾಸ ಅಪಾರ್ಟ್‌ಮೆಂಟ್ ಎದುರುಗಡೆ, ಸಮರ್ಪಕ (ಸಿಹಿ & ಬೋರ್‌ವೆಲ್) ನೀರಿನ ಸೌಲಭ್ಯ ಇರುವ ಡಬಲ್ ಬೆಡ್‌ರೂಂ ಮನೆ ಬಾಡಿಗೆಗೆ ಇದೆ. ಆಸಕ್ತರು ನೇರವಾಗಿ ಸಂಪರ್ಕಿಸಿ

M: 9909978170
M: 9448867485


## ಆನಂದ ಬಾಣ




# ಕಲೆಯೇ ಕಲಾವಿದರ ಉಸಿರು

## ಕನ್ನಡ ವಿವಿ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಅಭಿಮತ



**ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕದಲ್ಲಿ ಸಾವಿರಾರು ವರ್ಷಗಳ ಇತಿಹಾಸ ಹಾಗೂ ಇಂದಿಗೂ ಪ್ರಚಲಿತದಲ್ಲಿರುವ ಕಲೆ ಎಂದರೆ ಅದು ನಾಟಕ. ಲಲಿತ ಕಲೆಗಳಲ್ಲಿ ಜನ ಸಾಮಾನ್ಯರಿಗೆ ಹತ್ತಿರದ ಕಲೆಯಾಗಿದೆ ಎಂದು ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ನಾಟಕ ವಿಭಾಗ ಹಾಗೂ ಸಂಗೀತ ಮತ್ತು ನೃತ್ಯ ವಿಭಾಗ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ಸಂಗೀತ ಮತ್ತು ನೃತ್ಯ ವಿಭಾಗದಲ್ಲಿ ನಡೆದ ನಾಟಕ ರಚನೆ, ನಟನೆ ಹಾಗೂ ನಿರ್ದೇಶನದ ಹತ್ತು ದಿನದ ಶಿಬಿರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ನಾಟಕ ಕ್ಷೇತ್ರಕ್ಕೆ ಉತ್ತರ ಕರ್ನಾಟಕದ ಕೊಡುಗೆ ಅಗಾಧವಾದುದು. ಈ ಭಾಗದ ಅನೇಕ ನಾಟಕ ಕಲಾವಿದರು ತಮ್ಮ ಇಡೀ ಜೀವನವನ್ನು ನಾಟಕ ರಂಗಕ್ಕೆ ಮುಡಿಪಾಗಿಟ್ಟಿದ್ದರು. ಇಂದಿಗೂ ಹಳ್ಳಿಗಳಲ್ಲಿ ಜಾತಿ, ಧರ್ಮದ ಭೇದ ವಿರದೆ ಪ್ರತಿ ವರ್ಷವೂ ತಮ್ಮ ಊರುಗಳಲ್ಲಿ ನಾಟಕ ಪ್ರದರ್ಶನ ನಡೆಯುತ್ತವೆ. ನಟನೆಗೆ ಪೂರ್ವ ಸಿದ್ಧತೆ ಅವಶ್ಯಕತೆ ಇದೆ ಅದಕ್ಕೆ ಬೇಕಾದ ಕಲೆಗಳನ್ನೆಲ್ಲಾ ಶಿಬಿರದಲ್ಲಿ ಕಲಿಯಿರಿ ಎಂದು ಶಿಬಿರಾರ್ಥಿಗಳಿಗೆ ಹೇಳಿದರು.

ಟಿಬಿಡ್ಯಾಂ ಕನ್ನಡ ಕಲಾ ಸಂಘ, ಕಾರ್ಯದರ್ಶಿ ಚಂದ್ರಶೇಖರ್ ಎಸ್.ಎಸ್. ಮಾತನಾಡಿ, ನಾಟಕ, ನಟನೆ, ನಿರ್ದೇಶನಗಳು ತ್ರಿವೇಣಿ ಸಂಗಮ ಎಂಬಂತೆ ಮೂರು ಕಲೆಗಳನ್ನು ಒಂದೇ ಶಿಬಿರದಲ್ಲಿ ಆಯೋಜನೆಗೊಂಡಿದೆ. ಕನ್ನಡ ಕಲಾ ಸಂಘ ಸತತ 6 ದಶಕಗಳಿಂದ ರಂಗಭೂಮಿಯ ಸೇವೆ ಮಾಡುತ್ತಿದೆ. ಕನ್ನಡ ವಿಶ್ವವಿದ್ಯಾಲಯ ನಮ್ಮನ್ನು ಗುರುತಿಸಿರುವುದು ಸಂತೋಷ ತಂದಿದೆ. ಕರ್ನಾಟಕದಲ್ಲಿ ನಾಟಕ, ರಚನೆ, ನಿರ್ದೇಶನ ರಂಗಳಿಗೆ ಹಲವಾರು ಸಾಧಕರು ಸೇವೆಗೈದಿದ್ದಾರೆ. ಇಂದಿನ ಕಾಲದಲ್ಲಿ ನೃತ್ಯ, ಸಂಗೀತ, ನಾಟಕ ಅಗತ್ಯವಿದೆ ಅದಕ್ಕಾಗಿ ರಂಗಭೂಮಿ ಉಳಿಯುವುದು ಅತಿಮುಖ್ಯವಾಗಿದೆ ಎಂದರು.

ಶಿಬಿರದ ನಿರ್ದೇಶಕರಾದ ರಂಗಕರ್ಮಿಗಳು ನೀನಾಸಂ(ಧಾರವಾಡ)ನ ಶ್ರೀಕಾಂತ ನವಿಲುಗರಿ ಅವರು ಮಾತನಾಡಿ, ಕರ್ನಾಟಕದ ಪ್ರಸಿದ್ಧ ರಂಗಭೂಮಿಗಳಾದ ನೀನಾಸಂ, ರಂಗಾಯಣಗಳಂತೆ ಕನ್ನಡ ವಿಶ್ವವಿದ್ಯಾಲಯ ಸಹ ರೆಪಾರ್ಟಿ ಆಗಬೇಕು ಎಂಬುದು ನನ್ನ ಆಸೆ ಎಂದರು.

ಶಿಬಿರದ ಮತ್ತೊಬ್ಬ ನಿರ್ದೇಶಕರಾದ ಬಾಗಲಕೋಟದ ರಂಗಕರ್ಮಿಯಾದ ಶ್ರೀಹರಿ ಧೂಪದ ಮಾತನಾಡಿ, ಡಾ.ಚಂದ್ರಶೇಖರ ಕಂಬಾರರ ಕನಸು ಕೇವಲ ಸಂಶೋಧನೆ, ವಿಮರ್ಶೆ, ಅಲ್ಲದೆ ಸಾಂಸ್ಕೃತಿಕ ಕಲೆಗಳನ್ನು ಬೆಳೆಸುವುದು ಆಗಿದೆ ಎಂದರು. ಈ ಹಿಂದೆ ಹೊನ್ನ ಶೂಲಕ್ಕೇ ಎಂಬ ನಾಟಕವನ್ನು ವಿಶ್ವವಿದ್ಯಾಲಯದಲ್ಲಿ ಪ್ರದರ್ಶನ ನೀಡಿದ್ದನ್ನು ನೆನೆದರು.

ನೃತ್ಯ ವಿಭಾಗದ ಮುಖ್ಯಸ್ಥ ಡಾ. ವೀರೇಶ ಬಡಿಗೇರ ಪ್ರಾಸ್ತಾವಿಕ ಮಾತನಾಡಿ, ಕನ್ನಡ ವಿಶ್ವವಿದ್ಯಾಲಯ ಎಲ್ಲಾ ಲಲಿತ ಕಲೆಗಳ ಕೇಂದ್ರ ಆಗಬೇಕು ಎಂಬುದು ಡಾ.ಚಂದ್ರಶೇಖರ ಕಂಬಾರರ ಕನಸಾಗಿದೆ. ಆ ನಿಟ್ಟಿನಲ್ಲಿ ನಾವು ಸಾಗಬೇಕಿದೆ ಎಂದರು. ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರತಿಭೆಗಳಿಗೆ ಕೊರತೆಯಿಲ್ಲ. ಆ ಪ್ರತಿಭೆಗಳನ್ನು ಗುರುತಿಸಿ ಮುನ್ನಡೆಸುವವರು ಬೇಕು ಆ ಕಾರ್ಯವನ್ನು ಶಿಬಿರದಲ್ಲಿ ಮಾಡಲಾಗುವುದು ಎಂದರು. ಕನ್ನಡ ವಿವಿ ಸಿಬ್ಬಂದಿಗಳು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಜನರಿಗೆ ಶುದ್ಧ ಕುಡಿಯುವ ನೀರು

## ವರದಿ ಬೆನ್ನಲ್ಲೆ ಸರಿಪಡಿಸಿದ ಅಧಿಕಾರಿಗಳು

**ಹಂಪಿ ಟೈಮ್ಸ್ ಕೂಡ್ಲಿಗಿ**




ತಾಲೂಕಿನ ಪೂಜಾರಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಗಡಿ ಕಾತ್ರಿಕೆನಹಟ್ಟಿಯಲ್ಲಿ ಸುಮಾರು ಎರಡು ವರ್ಷಗಳ ಹಿಂದೆ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣವಾಗಿತ್ತು ಆದರೆ ನಿರ್ಮಾಣವಾದ ಕೆಲವೇ ದಿನಗಳಲ್ಲಿ ಕಿಡಿಗೇಡಿ ಗಳ ಕೈಚಳಕದಿಂದ ಯಂತ್ರೋಪಕರಣಗಳು ಮುರಿದು ಹಾಳಾಗಿದ್ದವು. ಎರಡು ಮೂರು ಬಾರಿ ಗ್ರಾಮ ಪಂಚಾಯತಿ ಅಧಿಕಾರಿಗಳು ಸರಿಪಡಿಸಿದರು ಸಹ ಮತ್ತೆ ಅದೇ ರೀತಿ ಹಾಳಾಗಿದ್ದವು, ನವಂಬರ್ 30ರಂದು ಹಂಪಿ ಟೈಮ್ಸ್ ಪತ್ರಿಕೆಯಲ್ಲಿ "ಬಾಯಾರಿತು ಎಂದು ಘಟಕದ ನೀರಿಗೆ ಹೋದೆ ನೀರಿಲ್ಲದೆ ತುಕ್ಕು ಹಿಡಿದಿದೆ ಕಾತ್ರಿಕೆಹಟ್ಟಿ ಶುದ್ಧ ಕುಡಿಯುವ ನೀರಿನ ಘಟಕ " ಶೀರ್ಷಿಕೆಯಡಿ ಸುದ್ದಿ ಪ್ರಕಟವಾಗಿತ್ತು, ಸುದ್ದಿ ಬೆನ್ನಲ್ಲೆ ಕೂಡ್ಲಿಗಿ ಕ್ಷೇತ್ರದ, ಶಾಸಕ ಡಾ. ಎನ್.ಟಿ. ಶ್ರೀನಿವಾಸ್ ಅವರ ಸೂಚನೆ ಮೇರೆಗೆ ಅಧಿಕಾರಗಳು ಈ ಗ್ರಾಮಕ್ಕೆ ಭೇಟಿ ಮಾಡಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಸರಿಪಡಿಸಿ ಜನರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿ ಕೊಟ್ಟಿದ್ದರಿಂದ ಇದೀಗ ಜನರು ಇದ್ದೂರಲ್ಲೆ ಶುದ್ಧ ಕುಡಿಯುವ ನೀರು ಪಡೆಯುವಂತಾಗಿದೆ. ಶಾಸಕರಿಗೆ ಸ್ಪಂದನೆಗೆ ಗ್ರಾಮಸ್ಥರು ಕೃತಜ್ಞತೆ ಸಲ್ಲಿಸಿದ್ದಾರೆ.



# ಮೈಲಾರ ಜಾತ್ರೆ : ಭದ್ರಾ ಡ್ಯಾಂನಿಂದ ತುಂಗಭದ್ರಾ ನದಿಗೆ 5800 ಕ್ಯೂಸೆಕ್ಸ್ ನೀರು ಬಿಡುಗಡೆ

**ಹಂಪಿ ಟೈಮ್ಸ್ ಹೊಸಪೇಟೆ**

ಹೂವಿನಹಡಗಲಿ ತಾಲೂಕಿನ ಮೈಲಾರ ಗ್ರಾಮದ ಶ್ರೀಮೈಲಾರಲಿಂಗೇಶ್ವರ ಸ್ವಾಮಿಯ ವಾರ್ಷಿಕ ಕಾರ್ಣಿಕೋತ್ಸವ ನಿಮಿತ್ತ ಭದ್ರಾ ಜಲಾಶಯದಿಂದ ತುಂಗಭದ್ರಾ ನದಿಗೆ ಫೆ.5 ರಿಂದ 11 ರವರೆಗೆ ಒಟ್ಟು 5800 ಕ್ಯೂಸೆಕ್ಸ್ ಪ್ರಮಾಣದ ನೀರನ್ನು ಹರಿಸಲಾಗುವುದು ಎಂದು ಕರ್ನಾಟಕ ನೀರಾವರಿ ನಿಗಮ ನಿಯಮಿತ, ಭದ್ರಾ ಯೋಜನಾ ವೃತ್ತ, ಬಿ.ಅರ್.ಪ್ರಾಜೆಕ್ಟ್ ಅಧೀಕ್ಷಕ ಅಭಿಯಂತರರು ತಿಳಿಸಿದ್ದಾರೆ.

ಸಾರ್ವಜನಿಕ ಹಿತದೃಷ್ಟಿಯಿಂದ ಫೆ.11 ರವರೆಗೆ ನದಿಯಲ್ಲಿ ಸಾರ್ವಜನಿಕರು, ರೈತರು ತಿರುಗಾಡುವುದು, ದನಕರುಗಳನ್ನು ಮೇಯಿಸುವುದು ಮತ್ತು ತೋಟಗಾರಿಕೆ ಸಂಬಂಧಿಸಿದ ಕೆಲಸ ಮಾಡುವುದು, ಇತ್ಯಾದಿಗಳನ್ನು ನಿಷೇಧಿಸಲಾಗಿದೆ. ಸಾರ್ವಜನಿಕರು, ರೈತರು ನದಿದಂಡೆಯಲ್ಲಿ ಪಂಪ್‌ಸೆಟ್ ಅಳವಡಿಸುವುದು ಮತ್ತು ಅನಧಿಕೃತವಾಗಿ ನೀರೆತ್ತುವುದನ್ನು ನಿಷೇಧಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹಂಪಿ ಉತ್ಸವ ಗ್ರಾಮೀಣ ಕ್ರೀಡಾಕೂಟಗಳು

## ಮಾ.1ರಂದು ಕುಸ್ತಿ, ಬಂಡಿಗಾಲಿ ತೊಡಿಸುವ ಸ್ಪರ್ಧೆ, ಕಲ್ಲು ಗುಂಡು ಎತ್ತುವ ಸ್ಪರ್ಧೆ

**ಹಂಪಿ ಟೈಮ್ಸ್ ಹೊಸಪೇಟೆ**

ಬರುವ ಹಂಪಿ ಉತ್ಸವ–2025 ರಲ್ಲಿ ಗ್ರಾಮೀಣ ಕ್ರೀಡಾಕೂಟಗಳಾದ ಕುಸ್ತಿ, ಬಂಡಿಗಾಲಿ ತೊಡಿಸುವ ಸ್ಪರ್ಧೆ ಮತ್ತು ಕಲ್ಲು ಗುಂಡು ಎತ್ತುವ ಸ್ಪರ್ಧೆಗಳನ್ನು ಮಾರ್ಚ್ 1 ರಂದು ಹೊಸ ಮಲಪನಗುಡಿ ಗ್ರಾಮದ ಶ್ರೀವಿಜಯ ವಿದ್ಯಾರಣ್ಯ ಪ್ರೌಢಶಾಲೆ ಮೈದಾನದಲ್ಲಿ ಆಯೋಜಿಸಲಾಗುವುದು ಎಂದು ಹಡಗಲಿ ತಾಪಂ ಇಒ, ಹಂಪಿ ಉತ್ಸವ ಕ್ರೀಡಾ ಸಮಿತಿ ಅಧ್ಯಕ್ಷರಾದ ಉಮೇಶ್ ಮೈನಳ್ಳಿ ತಿಳಿಸಿದ್ದಾರೆ.

**ಕುಸ್ತಿ ಸ್ಪರ್ಧೆ :** ರಾಜ್ಯ ಮಟ್ಟದ ಪುರುಷ, ಮಹಿಳಾ ಮತ್ತು ಜಿಲ್ಲಾ ಮಟ್ಟದ ಪುರುಷ ಸ್ಪರ್ಧೆಗಳನ್ನು ಆಯೋಜನೆ ಮಾಡಲಾಗಿದ್ದು, ಕುಸ್ತಿಯು ನಾಲ್ಕು ವಿಭಾಗಗಳಲ್ಲಿ ನಡೆಯಲಿದೆ. ರಾಜ್ಯ ಮಟ್ಟದ ಪುರುಷರ ಕುಸ್ತಿ ಪಂದ್ಯಾವಳಿ 57–65 ಕೆಜಿ, 66–74 ಕೆಜಿ, 75–85 ಕೆಜಿ, 86 ಮೇಲ್ಪಟ್ಟು, ಕುಸ್ತಿ ಪಂದ್ಯಾವಳಿಗಳನ್ನು ಸಂಘಟಿಸಲಾಗುವುದು. ರಾಜ್ಯ ಮಟ್ಟದ ಮಹಿಳೆಯರ ಕುಸ್ತಿ ಪಂದ್ಯಾವಳಿ 50 ಕೆಜಿ, 51–54 ಕೆಜಿ, 55–57 ಕೆಜಿ, 58 ಕೆಜಿ ಮೇಲ್ಪಟ್ಟು ಕುಸ್ತಿ ಪಂದ್ಯಾವಳಿಯನ್ನು ಸಂಘಟಿಸಲಾಗುವುದು. ಜಿಲ್ಲಾ ಮಟ್ಟದ ಪುರುಷರ ಕುಸ್ತಿ ಪಂದ್ಯಾವಳಿಯು 57–65 ಕೆಜಿ, 66–74 ಕೆಜಿ, 75–85 ಕೆಜಿ, 86 ಕೆಜಿ ಮೇಲ್ಪಟ್ಟು ಕುಸ್ತಿ ಪಂದ್ಯಾವಳಿಯನ್ನು ಸಂಘಟಿಸಲಾಗುವುದು. ಜಿಲ್ಲಾ ಮಟ್ಟದ ಚಿತ್ ಕುಸ್ತಿಯಲ್ಲಿ ಭಾಗವಹಿಸುವ ಕುಸ್ತಿ ಪಟುಗಳು ವಿಜಯನಗರ ಜಿಲ್ಲೆಯವರೇ ಆಗಿರಬೇಕು. ಕಡ್ಡಾಯವಾಗಿ ಆಧಾರ್ ಕಾರ್ಡ್ ತರಬೇಕು. ರಾಜ್ಯ ಮಟ್ಟದ ಕುಸ್ತಿಗಳು ಅಂಕಗಳ ಆಧಾರದ ಮೇಲೆ ನಡೆಯಲಿವೆ. ರಾಜ್ಯ ಮಟ್ಟದ ಪುರುಷ, ಮಹಿಳೆ ಕುಸ್ತಿಯಲ್ಲಿ ನಾಲ್ಕು ತೂಕದ ವಿಭಾಗದ ವಿಜೇತರಿಗೆ ಹಂಪಿ ಕಿಶೋರ, ಹಂಪಿ ಕಿಶೋರಿ, ಹಂಪಿ ಕುಮಾರ, ಹಂಪಿ ಕುಮಾರಿ, ಹಂಪಿ ಕೇಸರಿ, ಹಂಪಿ ಕಂಠೀರವ, ಹಂಪಿ ಮಹಿಳಾ ಕಂಠೀರವ ಪ್ರಶಸ್ತಿಯನ್ನು ನೀಡಲಾಗುವುದು. ಕುಸ್ತಿ ಪಂದ್ಯಾವಳಿಯಲ್ಲಿ ಭಾಗವಹಿಸುವ ಆಸಕ್ತ ಕುಸ್ತಿಪಟುಗಳು ಮಾರ್ಚ್ 01 ರಂದು ಬೆ.8 ಗಂಟೆಯಿಂದ 10 ಗಂಟೆಯೊಳಗೆ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬೇಕು. ಆಧಾರ ಕಾರ್ಡ್ ಮತ್ತು ಬ್ಯಾಂಕ್ ಪಾಸ್‌ಬುಕ್ ಜೆರಾಕ್ಸ್ ಪ್ರತಿಯೊಂದಿಗೆ ನೊಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ ಮೊ.9164693882, 9740110210 ಸಂಪರ್ಕಿಸಬಹುದು.




**ಬಂಡಿಗಾಲಿ ತೊಡಿಸುವ ಸ್ಪರ್ಧೆ:** ಗ್ರಾಮೀಣ ಕ್ರೀಡೆಯಾದ ಬಂಡಿಗಾಲಿ ತೊಡಿಸುವ ಸ್ಪರ್ಧೆಯಲ್ಲಿ ಭಾಗವಹಿಸುವವರು ವಿಜಯನಗರ ಜಿಲ್ಲೆಯ ನಿವಾಸಿಯಾಗಿರಬೇಕು. ಸಮಯದ ಅಧಾರದ ಮೇಲೆ ಪ್ರಥಮ, ದ್ವಿತೀಯ, ತೃತೀಯ ಸ್ಥಾನವನ್ನು ನೀಡಲಾಗುವುದು. ಬಂಡಿಯ ಗಾಲಿಗಳನ್ನು ಹೊರತೆಗೆದು ಪುನಃ ಜೋಡಿಸಬೇಕು. ಸ್ಪರ್ಧೆಯಲ್ಲಿ ನಿರ್ಣಾಯಕರ ತೀರ್ಪು ಅಂತಿಮವಾಗಿರುತ್ತದೆ. ಭಾಗವಹಿಸುವ ಸ್ಪರ್ಧಾಳುಗಳು ಹೊಸ ಮಲಪನಗುಡಿ ಗ್ರಾಮದ ಶ್ರೀವಿಜಯವಿದ್ಯಾರಣ್ಯ ಪ್ರೌಢಶಾಲೆ ಮೈದಾನದಲ್ಲಿ ಮಾರ್ಚ್ 1 ರಂದು ಬೆ.8 ಗಂಟೆಯಿಂದ ಬೆ.10 ಗಂಟೆಯೊಳಗೆ ಕಡ್ಡಾಯವಾಗಿ ಅಧಾರ ಕಾರ್ಡ್ ಮತ್ತು ಬ್ಯಾಂಕ್ ಪಾಸ್‌ಬುಕ್ ಜೆರಾಕ್ಸ್ ಪ್ರತಿಯೊಂದಿಗೆ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ ಮೊ.9986611992, 9036860314 ಸಂಪರ್ಕಿಬಹದು.

**ಗುಂಡು ಎತ್ತುವ ಸ್ಪರ್ಧೆ :** ಸ್ಪರ್ಧೆಯಲ್ಲಿ 174 ಕೆಜಿ, 155 ಕೆಜಿ, 135 ಕೆಜಿ ಮೂರು ವಿಭಾಗದಲ್ಲಿ ಕ್ರೀಡೆ ಆಯೋಜಿಸಲಾಗುತ್ತದೆ. ಆಸಕ್ತರು ಮೊ.8867784723, 9731444780 ಸಂಪರ್ಕಿಸಲು ಕೋರಲಾಗಿದೆ.

# ಆಕಸ್ಮಿಕ ಬೆಂಕಿ ಕೆನ್ನಾಲಗಿಗೆ ಮೆಕ್ಕೆಜೋಳದ ಬಣವಿ ಭಸ್ಮ



**ಹಂಪಿ ಟೈಮ್ಸ್ ಕೂಡ್ಲಿಗಿ**

ತಾಲೂಕಿನ ಪೂಜಾರಹಳ್ಳಿ ಗ್ರಾಮ ಪಂಚಾಯಿತಿಯ ಕನ್ನಿಬೋರಯ್ಯನಹಟ್ಟಿ ಗ್ರಾಮದ ಲೇಖಲಗೆರೆ ತಿಪ್ಪೇಸ್ವಾಮಿ ತಂದೆ ಬಸಯ್ಯ,ಇವರಿಗೆ ಸೇರಿದ 50,000ರೂ. ಅಂದಾಜು ಮೌಲ್ಯದ 6 ಟ್ಯಾಕ್ಟರ್ ಲೋಡ್ ಮೆಕ್ಕೆಜೋಳದ ಸಪ್ಪೆ ಬಣವಿ 1 ಎತ್ತಿನ ಗಾಡಿ ತೊಗರಿ, ಬಣವಿ ಮತ್ತು ಶೇಂಗಾ ಹೊಟ್ಟು, ಸೇರಿದಂತೆ ಬೆಂಕಿಗೆ ಅಹುತಿಯಾಗಿರುವ ಘಟನೆ ವರದಿಯಾಗಿದೆ. ಮೆಕ್ಕೆಜೋಳದ ಹೊಟ್ಟಿನ ಬಣವಿ ಬೆಂಕಿ ಕೆನ್ನಾಲಿಗೆಯೊಂದಿಗೆ ಧಗ, ಧಗಿಸಿ ಉರಿಯುತ್ತಿರುವುದನ್ನು ನೋಡಿ ರೈತ ಕಂಗಾಲಾಗಿದ್ದಾನೆ. ಅದೇ ಜಾಗದಲ್ಲಿ ಕಟ್ಟಿ ಹಾಕಿದ್ದ ಹಸುವಿಗೆ ಸುಟ್ಟು ಗಾಯವಾಗಿದೆ, ತಕ್ಷಣವೇ ಅಗ್ನಿಶಾಮಕ ಸಿಬ್ಬಂದಿಗೆ ತಿಳಿಸಿದ್ದಾರೆ. ಇದರಿಂದ ಅಗ್ನಿಶಾಮಕ ದಳದವರು ಬರುವ ಹೊತ್ತಿಗೆ ಸುಮಾರು 3 ಟ್ಯಾಕ್ಟರ್ ಲೋಡ್ ಮೆಕ್ಕೆಜೋಳದ ಸಪ್ಪೆ ಬಣವಿ, ಸಂಪೂರ್ಣ ಭಸ್ಮವಾಗಿದೆ. ಪರಿಹಾರಕ್ಕಾಗಿ ರೈತ ಲೇಖಲಗೆರೆ ತಿಪ್ಪೇಸ್ವಾಮಿ ಕೋರಿದ್ದಾರೆ, ಇದೇ ವೇಳೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹೆಚ್.ಸಿ.ನಾರಾಯಣಪ್ಪ, ಪಶು ಸಂಗೋಪನ ಇಲಾಖೆಯ ಸಿಬ್ಬಂದಿ ಮಂಜಣ್ಣ, ಅಗ್ನಿಶಾಮಕ ಠಾಣಾಧಿಕಾರಿ, ಕೆ. ಶರಣಬಸವ ರೆಡ್ಡಿ, ಚಾಲಕ ಹರಿಕೃಷ್ಣ, ಸಿಬ್ಬಂದಿಗಳಾದ, ಮಹೇಶ್,ರವಿ, ಅಜಯ್ ಕಾಶಿನಾಥ್, ಸೇರಿದಂತೆ ಗ್ರಾಮದ ಮುಖಂಡರು ಇದ್ದರು

ಶನಿವಾರ/Saturday 08.02.2025
ಹಂಪಿ ಟೈಮ್ಸ್ HAMPI TIMES

# ಕಂಬ



ವಿಜಯನಗರ ಸಾಮ್ರಾಜ್ಯದ ಸುಂದರ ನಗರ ಹಂಪಿ. ಇಲ್ಲಿನ ದೇವಸ್ಥಾನಗಳು, ಶಿಲ್ಪ ಕಲೆಗಳು, ಕೆತ್ತನೆಗಳು ಒಂದಕ್ಕಿಂತ ಒಂದು ಅದ್ಭುತವಾಗಿದ್ದು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತದೆ. ಇಲ್ಲಿಯ ಕೆತ್ತನೆಗಳಲ್ಲಿ ನೂರಾರು ನಮೂನೆಯ ಕಲೆಗಳಿದ್ದು.ವಾಸ್ತು ಶಿಲ್ಪದ ಬಗ್ಗೆ ಹಲವಾರು ಮಾಹಿತಿಗಳನ್ನು ತಿಳಿದುಕೊಳ್ಳಬಹುದಾಗಿದೆ. ಹಾಗೆಯೇ ನೋಡಲು ಇಲ್ಲಿ ಹತ್ತಾರು ವಿಶೇಷ ಸ್ಥಳಗಳಿವೆ. ಅದರಲ್ಲೂ ವಿಜಯ ವಿಠ್ಠಲ ದೇಗುಲದ ಸಪ್ತಸ್ವರ ಹೊರಡಿಸುವ ಕಂಬಗಳು ಪ್ರವಾಸಿಗರನ್ನು ಆಕರ್ಷಿಸುತ್ತದೆ.

ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ಸಂಗೀತ ಕಂಬಗಳನ್ನು ನಿರ್ಮಿಸಿದ್ದಾರೆ. ಆ ಕಾಲದಲ್ಲಿ ನುರಿತ ಶಿಲ್ಪಿಗಳು, ವಾಸ್ತುಶಿಲ್ಪಿಗಳು, ಧ್ವನಿ ವಿಜ್ಞಾನದಲ್ಲಿ ಪರಿಣಿತರಾಗಿದ್ದವರು ಮತ್ತು ವಿಶಿಷ್ಟ ಶಬ್ದಗಳನ್ನು ಉತ್ಪಾದಿಸುವ ಕಲ್ಲುಗಳನ್ನು ಆರಿಸುವವರಿಂದ ಈ ಆಕರ್ಷಕ ಸಂಗೀತ ಕಂಬವನ್ನು ರಚಿಸಲಾಗಿದೆ ಎಂದು ಹೇಳಲಾಗುತ್ತದೆ. ಈ ಸಂಗೀತ ಕಂಬಗಳಿಂದ ಬರಿ ಸಪ್ತ ಸ್ವರಗಳು ಕೇಳಿ ಬರುವುದಲ್ಲದೆ ಇದರ ಮೇಲೆ ಸೊಗಸಾದ ಶಿಲ್ಪಕಲೆಯ ಕೆತ್ತನೆಗಳನ್ನು ಮಾಡಲಾಗಿದೆ.



ಹಂಪಿಯ ವಿಜಯ ವಿಠ್ಠಲ ದೇವಸ್ಥಾನದ ಕಂಬಗಳು ಸಂಗೀತ ಕಂಬಗಳೆಂದೇ ಹೆಸರಾಗಿವೆ. 56 ಕಂಬಗಳ ಈ ಪ್ರಾಕಾರ ಮೇಲ್ಛಾವಣಿಗೆ ಆಧಾರ ಕೊಡುವುದಲ್ಲದೆ ಮಧ್ಯದ ಮುಖ್ಯ ಕಂಬದ ಸುತ್ತ ಏಳು ಕಂಬಗಳು ಸಂಗೀತ ವಾದ್ಯದ ತಂತಿಗಳಂತೆ ಸುತ್ತುವರೆದು ಒಂದೊಂದೂ ಒಂದು ತೆರನಾದ ಸ್ವರ ಹೊರಡಿಸುತ್ತದೆ . ಅದೂ ನಾವು ಚಂದನದ ಕೊರಡಿನಿಂದ ಮೀಟಿದಾಗ ಸ್ವರ ಹೊರಡುವ ಬಗೆ ಅಚ್ಚರಿ ಮೂಡಿಸುತ್ತದೆ . ಇದುವರೆಗೂ ಇದರ ರಹಸ್ಯವನ್ನು ಯಾರೂ ಅರಿಯಲು ಸಾಧ್ಯವಾಗಿಲ್ಲ .

ಒಟ್ಟಿನಲ್ಲಿ ವಿಜಯ ವಿಠ್ಠಲ ದೇವಾಲಯದ ಸಂಗೀತ ಕಂಬಗಳು ಅಚ್ಚರಿಯ ತಾಣವಾಗಿದ್ದು ಎಲ್ಲಾ ಪ್ರವಾಸಿಗರ ಮನಸೆಳೆಯುತ್ತದೆ.

ಸಪ್ತಸ್ವರಗಳ ಕಂಬದಲ್ಲಿ ಅಡಗಿರುವ ರಹಸ್ಯವನ್ನು ಭೇದಿಸಲು ಬ್ರಿಟಿಷ್ ಅಧಿಕಾರಿಗಳು ಎರಡು ಸಂಗೀತ ಕಂಬಗಳನ್ನು ಕತ್ತರಿಸಿ ಅದರೊಳಗಿಂದ ಸಂಗೀತದ ಸ್ವರಗಳು ಹೇಗೆ ಮೂಡಿ ಬರುತ್ತದೆ ಎಂದು ಕಂಡುಹಿಡಿಯಲು ಅನೇಕ ಸಂಶೋಧನೆಗಳನ್ನು ಮಾಡಿ ವಿಫಲರಾಗಿದ್ದರು ಈಗಲೂ ಅವರು ಕತ್ತರಿಸಿದ ಎರಡು ಕಂಬಗಳು ಹಾಗೇ ಉಳಿದಿದೆ.

ಈ ಕಂಬಗಳನ್ನು ಪ್ರವಾಸಿಗರು ಮುಟ್ಟಿ ತಟ್ಟಿ ಸಂಗೀತವನ್ನು ಆಲಿಸುತ್ತಿದ್ದರು. ಇದರಿಂದ ಪುರಾತನ ಕಂಬಗಳಿಗೆ ಹಾನಿಯಾಗುವ ಸಂಭವ ಹೆಚ್ಚಾಗಿರುವುದರಿಂದ ಇದನ್ನು ತಪ್ಪಿಸಲು ಪುರಾತತ್ವ ಇಲಾಖೆಯ ಈಗ ಕ್ಯೂಆರ್ ಕೋಡ್ ಅಳವಡಿಸಲು ಮುಂದಾಗಿದೆ.

**–ಚೇತನ ಭಾರ್ಗವ, ಬೆಂಗಳೂರು**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

### ಹಂಪಿ ಉತ್ಸವ ಹಾಗೂ ಹಲವು ಸಾಂಸ್ಕೃತಿಕ ಉತ್ಸವಗಳು ರೂವಾರಿ

# ಸಜ್ಜನ ಸಾಂಸ್ಕೃತಿಕ ರಾಜಕಾರಣಿ ಎಂ.ಪಿ.ಪ್ರಕಾಶ್



ಎಂ.ಪಿ.ಪ್ರಕಾಶ್ ಈ ನಾಡು ಕಂಡ ಅಪರೂಪದ ಸಾಂಸ್ಕೃತಿಕ ರಾಜಕಾರಣಿ. ಬಹುತ್ವದ ಬೆರಗನ್ನು, ಜನಪದ ನಿಲುವನ್ನು, ಸಾಮಾಜಿಕ ಕಾಳಜಿಯನ್ನು, ಹಾಗೂ ಕಲೆ ಸಾಹಿತ್ಯ ಸಂಗೀತ ರಂಗಭೂಮಿ ಹೀಗೆ ಲಲಿತ ಕಲೆಗಳ ಬಗ್ಗೆ ಅಪಾರವಾದ ಆಸಕ್ತಿ,

ಅಧ್ಯಯನದ ಜ್ಞಾನವುಳ್ಳವರಾಗಿದ್ದವರು. ಅವರಲ್ಲಿ ಸರಳತೆ, ಶಿಸ್ತು, ಸೌಜನ್ಯ, ಆಡಳಿತದಲ್ಲಿ ಸಾಂಸ್ಕೃತಿಕ ಅಸ್ಮಿತೆಯನ್ನು ಅಳವಡಿಸಿ ಕೊಂಡಿದ್ದವರು ಹಾಗೂ ಜನಸಾಮಾನ್ಯರೂ ಅವರ ಎದುರು ನಿಂತು ಮುಖಾಮುಖಿ ಸಮಸ್ಯೆಗಳನ್ನು ಹೇಳಿಕೊಳ್ಳುವಷ್ಟು ಚರ್ಚಿಸುವಷ್ಟು ಸರಳ ರಾಜಕಾರಣಿಯಾಗಿದ್ದವರು. ರಾಜಕೀಯದ ಜೊತೆ ಜೊತೆಗೆ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ನಾಡನ್ನು ಕಟ್ಟುವ ಗುರಿ ಮತ್ತು ಉದ್ದೇಶಗಳನ್ನು ಹೊಂದಿದ್ದರು. ನಾಡು ನುಡಿ, ಸಾಹಿತ್ಯ, ಸಂಸ್ಕೃತಿ ಇವುಗಳು ಎಂ.ಪಿ. ಪ್ರಕಾಶ್ ಅವರ ರಾಜಕೀಯದ ಅನುಸಂಧಾನದ ಭಾಗಗಳೆಯಾಗಿದ್ದವು. ಕೇವಲ ರಾಜಕಾರಣವನ್ನೇ ಏಕೈಕ ಉದ್ದೇಶವನ್ನಾಗಿ ಇಟ್ಟುಕೊಂಡಿರುವ ರಾಜಕಾರಣಿ ಯಾವತ್ತೂ ಈ ನಾಡನ್ನು ದೇಶವನ್ನು ಕಟ್ಟಲಾರ ಎಂಬುದನ್ನು ಅವರು ಅರಿತ ರಾಜಕಾರಣಿಯಾಗಿದ್ದವರು. ಈ ಹೊತ್ತಿನ ರಾಜಕಾರಣಿ ಹಾಗೂ ರಾಜಕೀಯದ ಉದ್ದೇಶಗಳನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ. ರಾಜಕಾರಣಿಗಳ ನಡವಳಿಕೆ ಅವರ ಮಾತು ಮತ್ತು ಕಾರ್ಯಗಳಿಗೆ ಯಾವುದೇ ಹೊಂದಾಣಿಕೆಗಳು ಕಾಣುತ್ತಿಲ್ಲ. ಒಬ್ಬ ರಾಜಕಾರಣಿಯ ಕುರಿತು ಅವರ ವ್ಯಕ್ತಿತ್ವವನ್ನು ಕುರಿತು ಬರೆಯುವಾಗ ಎರಡು ಪ್ರಮುಖವಾದ ಅಂಶಗಳನ್ನು ಪರಿಗಣಿಸಬೇಕಾಗುತ್ತದೆ ಎಂದು ನಾನು ಭಾವಿಸಿದ್ದೇನೆ. ಮೊದಲನೆಯದು ರಾಜಕಾರಣಿಯೊಬ್ಬ ತನ್ನ ಚಿಂತನೆ ಮತ್ತು ಕಾರ್ಯವನ್ನು ಎಷ್ಟು ಸೃಜನಶೀಲವಾಗಿ, ಸಾಮಾಜಿಕವಾಗಿ, ಜಾತ್ಯತೀತವಾಗಿ ಹೇಗೆ ನಿರ್ವಹಿಸಿದ ಎನ್ನುವುದು. ಮತ್ತೊಂದು ಪ್ರಜಾಪ್ರಭುತ್ವವನ್ನು ಬಲಪಡಿಸಲು ಸಂವಿಧಾನಾತ್ಮಕವಾಗಿ ಆತ ನಿರ್ವಹಿಸಿದ ಕಾರ್ಯಗಳೆಷ್ಟು ಎಂಬುದು ಬಹಳ ಪ್ರಮುಖ ವಾಗುತ್ತದೆ. ಈ ಅಂಶಗಳ ಹಿನ್ನೆಲೆಯಲ್ಲಿ ಎಂಪಿ ಪ್ರಕಾಶ್ ಅವರ ವ್ಯಕ್ತಿತ್ವವನ್ನು ಗ್ರಹಿಸಿದಾಗ ಅವರ ಜನಪರ, ಸಂವಿಧಾನದ ಆಶಯಗಳಿಗೆ ಅನುಗುಣವಾಗಿ ತಮ್ಮ ರಾಜಕೀಯದ ಕಾರ್ಯಗಳನ್ನು ನಿರ್ವಹಿಸಿದ್ದವರು.

ಶಾಸಕರಾಗಿ ಮಂತ್ರಿಗಳಾಗಿ ಉಪಮುಖ್ಯಮಂತ್ರಿಗಳಾಗಿ ಅವರು ಈ ನಾಡಿಗೆ ಕೊಟ್ಟ ಕೊಡುಗೆ ಅಪಾರವಾದದ್ದು. ರಂಗಭೂಮಿ ಮತ್ತು ಸಾಹಿತ್ಯದ ಮೇಲೆ ಅವರಿಗೆ ಅಪಾರವಾದ ಆಸಕ್ತಿ ಇತ್ತು. 14 ಹೆಚ್ಚು ಖಾತೆಗಳನ್ನು ನಿರ್ವಹಿಸಿ ಅವುಗಳಿಗೆ ಒಂದು ಘನತೆಯನ್ನು ತಂದು ಕೊಟ್ಟಿದ್ದವರು ಇವೆಲ್ಲದಕ್ಕಿಂತ ಮುಖ್ಯವಾಗಿ ಅವರ ವ್ಯಕ್ತಿತ್ವದಲ್ಲಿ ಸರಳತೆ ಸಜ್ಜನಿಕೆ ಸಹೃದಯತೆ ವಿನಯವಂತಿಕೆ ಅವರಲ್ಲಿ ಸಹಜವಾಗಿ ಇದ್ದವು. ಜನಸಾಮಾನ್ಯರ ಸಮಸ್ಯೆಗಳಿಗೆ ಮರುಗುವ ಸ್ಪಂದಿಸುವ ಮನಸ್ಸು ಗುಣ ಅವರಲ್ಲಿತ್ತು. ಎಂ.ಪಿ.ಪ್ರಕಾಶ್ ವ್ಯಕ್ತಿತ್ವ ಕುರಿತು ಚಂಪಾ ಅವರು ಹೇಳಿದ ಮಾತು ಇಲ್ಲಿ ಹೇಳಬಹುದು, ನಮ್ಮ ಬಹುತೇಕ ರಾಜಕಾರಣಿಗಳು ಸರಳ ರೇಖೆಗಳು ಕೆಲವರಂತೂ ಹೇಳಿ ಮಾಡಿಸಿದ ಕಾರ್ಟೂನ್ಗಳು ಆದರೆ ನಮ್ಮ ಪ್ರಕಾಶ್ ಮಾತ್ರ ಒಂದು ಕಲಾತ್ಮಕವಾದ ಚಿತ್ರದಂತೆ ಒಮ್ಮೆ ನೋಡಿದ ವರನ್ನು ಮತ್ತೆ ಮತ್ತೆ ತನ್ನೆಡೆಗೆ ಸೆಳೆಯುವ ಸಂಕೀರ್ಣ ಚಿತ್ರ ವಿದು ಎಂದು ಕರೆದಿರುವುದು ಅರ್ಥಪೂರ್ಣವಾಗಿದೆ.



ಎಂ.ಎಂ.ಶಿವಪ್ರಕಾಶ
ಲೇಖಕರು: ಹೊಸಪೇಟೆ
ಮೊ: 9449654489

Scan For Digital Colourful
HAMPI TIMES E-paper

ಎಂ.ಪಿ. ಪ್ರಕಾಶ್‌ರಿಗೆ ಗ್ರಾಮ ಪಂಚಾಯಿತಿ ಸದಸ್ಯ ನಿಂದ ರಾಷ್ಟ್ರಪತಿವರೆಗೆ, ಪ್ರಾಥಮಿಕ ಶಾಲೆಯ ಶಿಕ್ಷಕರಿಂದ ವಿಶ್ವ ವಿದ್ಯಾಲಯದ ಕುಲಪತಿ ವರೆಗೆ ಎಲ್ಲರಿಗೂ ಆತ್ಮೀಯರಾಗಿದ್ದವರು. ಅವರ ಆಸಕ್ತಿ ಬಹು ಮುಖವಾದದ್ದು. ವಿಶೇಷವಾಗಿ ರಂಗಭೂಮಿ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಅವರು ಮಾಡಿರುವ ಸಾಧನೆ ಅಪಾರ. ಹಂಪಿ ಉತ್ಸವವನ್ನು ಪ್ರಾರಂಭಿಸಿ ಅದನ್ನು ಅಂತರಾಷ್ಟ್ರೀಯ ಮಟ್ಟದವರಿಗೆ ಬೆಳೆಸಿದವರು. ಇದಲ್ಲದೆ ಲಕ್ಕುಂಡಿ ಉತ್ಸವ, ಕದಂಬೋತ್ಸವ, ಪುರಂದರ ಆರಾಧನೆ, ಕನಕ ಪುರಂದರ ಪ್ರಶಸ್ತಿ ಸ್ಥಾಪನೆ, ಗುಬ್ಬಿ ವೀರಣ್ಣ ಪ್ರಶಸ್ತಿ, ಏಕೀಕರಣ ಪ್ರಶಸ್ತಿ, ಜಾನಪದ ಕಲಾವಿದರಿಗೆ ಮಾಶಾಸನ, ಕನ್ನಡ ವಿಶ್ವವಿದ್ಯಾಲಯ ಮತ್ತು ಕೃಷಿ ವಿಶ್ವವಿದ್ಯಾಲಯಗಳ ಸ್ಥಾಪನೆ. ಜಿಲ್ಲಾ ಕೇಂದ್ರಗಳಲ್ಲಿ ರಂಗಮಂದಿರ ಸ್ಥಾಪನೆ. ನವರಸ ಪುರ ಉತ್ಸವ, ಪಟ್ಟದಕಲ್ಲು ಉತ್ಸವ, ಸಮಗ್ರ ವಚನಗಳ ಸಂಪುಟ ಯೋಜನೆ ಹೀಗೆ ಹತ್ತಾರು ಸಾಂಸ್ಕೃತಿಕ ಕಾರ್ಯಗಳನ್ನು ಅವರು ತಮ್ಮ ಅಧಿಕಾರ ಅವಧಿಯಲ್ಲಿ ಮಾಡಿ ಎಲ್ಲರಿಗೂ ಮಾದರಿಯಾಗಿದ್ದಾರೆ.

ಎಂಪಿ ಪ್ರಕಾಶ್ ಅವರು ಕರ್ನಾಟಕದ ರಾಜಕಾರಣದಲ್ಲಿ ಸಜ್ಜನ ಸಾಂಸ್ಕೃತಿಕರಾಜಕಾರಣಿ ಎಂದೆಗುರುತಿಸಲ್ಪಟ್ಟವರು. ಹೂವಿನಹಡಗಲಿ ವಿಧಾನಸಭಾ ಕ್ಷೇತ್ರದಿಂದ 1983 ರಲ್ಲಿ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗಿ ಮಂತ್ರಿಯಾದವರು. ರಾಮಕೃಷ್ಣ ಹೆಗಡೆ, ಎಚ್ ಡಿ ದೇವೇಗೌಡ, ಎಸ್. ಆರ್ ಬೊಮ್ಮಾಯಿ, ಜೆ. ಎಚ್. ಪಟೇಲ್, ಧರ್ಮಸಿಂಗ್, ಕುಮಾರಸ್ವಾಮಿ, ಯಡಿಯೂರಪ್ಪ ಮೊದಲಾದವರ ಮಂತ್ರಿಮಂಡಲದಲ್ಲಿ ಪ್ರಭಾವಿ ಮಂತ್ರಿಗಳಾಗಿ ಉಪ ಮುಖ್ಯಮಂತ್ರಿಯಾಗಿ ಸಮರ್ಥವಾಗಿ ಆಡಳಿತ ನಿರ್ವಹಿಸಿದ್ದವರು. ನಾಲ್ಕು ಬಾರಿ ಶಾಸಕರಾಗಿ ಒಂದು ಬಾರಿ ವಿಧಾನಪರಿಷತ್ ಸದಸ್ಯರಾಗಿ ಹಲವಾರು ಖಾತೆಗಳ ಸಚಿವರಾಗಿ ಸುಮಾರು 40 ವರ್ಷಗಳ ಕಾಲ ರಾಜಕೀಯದಲ್ಲಿ ಇದ್ದು ರಾಜಕೀಯಕ್ಕೆ ಒಂದು ಘನತೆ ಗೌರವವನ್ನು ತಂದುಕೊಟ್ಟಿದ್ದವರು.

ಬಳ್ಳಾರಿ ಜಿಲ್ಲೆಯನ್ನು ಪ್ರತಿನಿಧಿಸಿ ರಾಜಕಾರಣಕ್ಕೆ ಒಂದು ಘನತೆ ಗೌರವ ತಂದುಕೊಟ್ಟವರು ಇಬ್ಬರು ಮುತ್ಸದ್ದಿ ರಾಜಕಾರಣಿಗಳು. ಒಬ್ಬರು ಎಂ. ವೈ. ಘೋರ್ಪಡೆ ಹಾಗೂ ಎಂ.ಪಿ. ಪ್ರಕಾಶ್ ಅದರಲ್ಲೂ ವಿಶೇಷವಾಗಿ ಎಂ.ಪಿ. ಪ್ರಕಾಶ್ ಇಡೀ ಅಖಂಡ ಬಳ್ಳಾರಿ ಜಿಲ್ಲೆಯ ಪ್ರತಿ ಗ್ರಾಮ ಗ್ರಾಮದ ಪರಿಚಯ ಇದ್ದವರು. ಇಡೀ ಜಿಲ್ಲೆಯ ರಾಜಕಾರಣಿಗಳನ್ನ ಬಲ್ಲವರಾಗಿದ್ದರು ಹಾಗೂ ಹಿಂದುಳಿದವರು, ದಲಿತರನ್ನು ತಮ್ಮ ಹತ್ತಿರದಲ್ಲಿ ಇಟ್ಟುಕೊಂಡು ರಾಜಕಾರಣದಲ್ಲಿ ಬೆಳೆಸಿದ ಧೀಮಂತ ರಾಜಕಾರಣಿಯಾಗಿದ್ದರು. ಇಡೀ ಜಿಲ್ಲೆಯನ್ನು ಪ್ರತಿನಿಧಿಸಿದ್ದ ಇದುವರೆಗಿನ ಏಕೈಕ ರಾಜಕಾರಣಿ ಎಂದರೆ ಅದು ಎಂಪಿ ಪ್ರಕಾಶ್ ಒಬ್ಬರೆ. ಈ ಹೋತ್ತಿನ ಮಂತ್ರಿಗಳು ತಮ್ಮ ತಮ್ಮ ಕ್ಷೇತ್ರಕ್ಕೆ ಸೀಮಿತ ಮಂತ್ರಿಗಳಾಗಿದ್ದಾರೆ ಹೊರತು ಇಡೀ ಜಿಲ್ಲೆಯ ರಾಜಕಾರಣಿಯಾಗಿ ಪರಿಚಿತರಾಗಿ ಗುರುತಿಸಿಕೊಂಡೆ ಇಲ್ಲ. ಇತ್ತೀಚಿನ ವರ್ಷಗಳಲ್ಲಿ ಹೊರಗಿನವರಿಗೆ ಜಿಲ್ಲಾ ಉಸ್ತುವಾರಿಗಳನ್ನು ಕೊಡುತ್ತಿರುವುದರಿಂದ ಮಂತ್ರಿಗಳ ಪರಿಚಯವೇ ಬಳ್ಳಾರಿ ವಿಜಯನಗರ ಜಿಲ್ಲೆಗಳ ಜನರಿಗೆ ಇಲ್ಲದಂತಾಗಿದೆ. ಈ ಸಂದರ್ಭದಲ್ಲಿ ಇಡೀ ಅಖಂಡ ಬಳ್ಳಾರಿಯನ್ನು ಪ್ರತಿನಿಧಿಸಿ ಅಭಿವೃದ್ಧಿಪಡಿಸಿದೆ ಮುತ್ಸದ್ದಿ ಎಂ. ಪಿ.ಪ್ರಕಾಶ್ ನೆನಪಾಗುತ್ತಾರೆ.

ಎಂ.ಪಿ.ಪ್ರಕಾಶರು ತಮ್ಮ ಬಿಡುವಿಲ್ಲದ ರಾಜಕಾರಣದ ಸಮಯ ದಲ್ಲಿಯೂ ತಮ್ಮ ಸಾಹಿತ್ಯ ಸಂಸ್ಕೃತಿ ರಂಗಭೂಮಿಗೆ ಕಾಲಾವಕಾಶವನ್ನು ಕೊಟ್ಟು ರಂಗಭೂಮಿಯನ್ನು ಕಟ್ಟಿ ಬೆಳೆಸಿದವರು. ಆಧುನಿಕ ನಾಟಕಗಳನ್ನು ನಿರ್ದೇಶನ ಮಾಡುವುದರ ಮೂಲಕ ಹೊಸ ಅಲೆಯ ನಾಟಕಗಳನ್ನು ಗ್ರಾಮೀಣ ಭಾಗದ ಜನರಿಗೆ ಪರಿಚಯಿಸಿ ದವರು. ಇವರ ಕಳಿಂಗ ಸೂರ್ಯ ಮತ್ತು ಇತರ ಕಥೆಗಳು ರಾಜಕೀಯ ಮಧ್ಯ ಬಿಡುವು, ಡಮ್ಮಿಂಗೋಸ್ ಪಿಯಾಸ್ ಕಂಡ ವಿಜಯನಗರ, ಅಲೆಕ್ಸಾಂಡರ್ ಮತ್ತು ಜಾನ್ ಗಾಲಿಂಗ ಕಂಡ ವಿಜಯನಗರ, ಸೂರ್ಯಶಿಕಾರಿ ಚುನಾವಣೆಯ ಸುಧಾರಣೆಗಳು ಹಾಗೂ ರಾಜಕೀಯ ಸಂಕಲ್ಪದ ಅಭಾವ,ಎಸ್ ನಿಜಲಿಂಗಪ್ಪನವರ ನನ್ನ ಜೀವನ ಮತ್ತು ರಾಜಕೀಯ ಆತ್ಮಚರಿತೆಯ ಅನುವಾದ ಮೊದಲಾದ ಕೃತಿಗಳನ್ನು ಅನುವಾದಿಸಿದ್ದಾರೆ. ಇವರು ಅನುವಾದಿಸಿದ ಸೂರ್ಯ ಶಿಕಾರಿ ನಾಟಕ ನಾಡಿನಾದ್ಯಂತ ಹೆಚ್ಚು ಜನಪ್ರಿಯವಾಗಿ ಪ್ರದರ್ಶನ ಗೊಳ್ಳುತ್ತಿದೆ. ಇವರು ಏಳಕ್ಕಿಂತ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ ಇವರಿಗೆ ಜಯದೇವ ಪ್ರಶಸ್ತಿ ರಾಜಕೀಯ ಮಧ್ಯದ ಬಿಡುವ ಪುಸ್ತಕಕ್ಕೆ ಬೆಳಗಾವಿಯ ನಾಗನೂರು ರುದ್ರಾಕ್ಷಿ ಮಠದ ಪ್ರಶಸ್ತಿ 1998ರಲ್ಲಿ ನಾಟಕ ಅಕಾಡೆಮಿ ಗೌರವ ಪ್ರಶಸ್ತಿ ಮೊದಲಾದ ಗೌರವ ಪುರಸ್ಕಾರಗಳು ಸಂದಿವೆ.

ಈ ನಾಡು ಕಂಡ ಸಜ್ಜನ ಸಾಂಸ್ಕೃತಿಕ ರಾಜಕಾರಣಿಯಾಗಿದ್ದ ಎಂ.ಪಿ.ಪ್ರಕಾಶ್ ಅವರು ನಮ್ಮನ್ನಗಲಿ 14 ವರ್ಷಗಳಾದವು. ಆದರೂ ಎಂ.ಪಿ. ಪ್ರಕಾಶ್ ಅವರು ಜನರ ಮನೆ ಮಾತಾಗಿದ್ದಾರೆ. ಹಂಪಿ ಉತ್ಸವದ ಸಂದರ್ಭದಲ್ಲಿ ಜನರಿಗೆ ಅವರ ನೆನಪು ಮತ್ತೇ ಮತ್ತೇ ನೆನಪಾಗುತ್ತದೆ. ಜನರು ಅವರನ್ನು ಹಂಪಿ ಪ್ರಕಾಶ್ ಎಂದೇ ಇಂದಿಗೂ ಪ್ರೀತಿಯಿಂದ, ಅಭಿಮಾನದಿಂದ ಕರೆಯುತ್ತಾರೆ ಎಂದರೆ ಅವರ ಸಾಂಸ್ಕೃತಿಕ ಅಸ್ಮಿತೆ ಎಂಥಹದ್ದು ಎನ್ನುವುದು ಅರ್ಥವಾಗುತ್ತದೆ. ಹತ್ತಾರು ಕೋಟಿ ವೆಚ್ಚ ಮಾಡಿ ಹಂಪಿ ಉತ್ಸವವನ್ನು ಆಚರಿಸಿದರೂ ಎಂ.ಪಿ.ಪ್ರಕಾಶ್ ಆಶಯದ ಅವರು ಸಂಘಟಿಸುತ್ತಿದ್ದ ಉತ್ಸವದ ಮಟ್ಟಕ್ಕೆ ಆಗುತ್ತಿಲ್ಲ ಎನ್ನುವುದು ಜನರ ಅಭಿಪ್ರಾಯವಾಗಿದೆ.

### ವಿಶ್ವ ಕ್ಯಾನ್ಸರ್ ದಿನಾಚರಣೆ: ಜಾಗೃತಿ ಕಾರ್ಯಕ್ರಮದಲ್ಲಿ ಡಾ.ಲಿಂಗರಾಜು ಹೇಳಿಕೆ

# ಕೊಳಚೆ ಪ್ರದೇಶಗಳಲ್ಲಿ ಕ್ಯಾನ್ಸರ್ ಖಾಯಿಲೆಯ ಅರಿವು ಮೂಡಿಸಿ

**■ ಹಂಪಿ ಟೈಮ್ಸ್ ಕೊಪ್ಪಳ**

ಗ್ರಾಮಗಳ ಮತ್ತು ನಗರ ಪ್ರದೇಶದ ಕೋಳಚೆ ಪ್ರದೇಶಗಳಲ್ಲಿ ಕ್ಯಾನ್ಸರ್ ಖಾಯಿಲೆಯ ಕುರಿತು ಅರಿವು ಮೂಡಿಸಿ, ಅಗತ್ಯ ಮುಂಜಾಗೃತೆ ವಹಿಸುವಂತೆ ಕೊಪ್ಪಳ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಟಿ.ಲಿಂಗರಾಜು ಅವರು ವೈದ್ಯಾಧಿಕಾರಿಗಳಿಗೆ ಮತ್ತು ಮಹಿಳಾ ಶಶ್ರೂಷಾಧಿಕಾರಿಗಳಿಗೆ ಸೂಚನೆ ನೀಡಿದರು.

ಅವರು ಇತ್ತೀಚೆಗೆ ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಘಟಕ ಮತ್ತು ಕೊಪ್ಪಳ ಎನ್.ಸಿ.ಡಿ ವಿಭಾಗದ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಪಂಚಾಯತ್ ಜೆ.ಹೆಚ್ ಪಟೇಲ್ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ "ವಿಶ್ವ ಕ್ಯಾನ್ಸರ್ ದಿನಾಚರಣೆ" ಪ್ರಯುಕ್ತ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

ಪ್ರತಿ ವರ್ಷ ಫೆಬ್ರವರಿ 4 ರಂದು "ವಿಶ್ವ ಕ್ಯಾನ್ಸರ್ ದಿನಾಚರಣೆ" ಕಾರ್ಯಕ್ರ ಮವನ್ನು ಆಚರಿಸಲಾಗುತ್ತದೆ. ಇದರ ಉದ್ದೇಶ ಕ್ಯಾನ್ಸರ್ ಖಾಯಿಲೆ ಹರಡುವ ರೀತಿ, ಲಕ್ಷಣಗಳು ಅದರ ಮುಂಜಾಗ್ರತಿ ಕ್ರಮಗಳ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವುದಾಗಿದೆ. ಮುಖ್ಯವಾಗಿ ಈ ರೋಗವು ಅಸಾಂಕ್ರಾಮಿಕ ರೋಗಗಳಲ್ಲಿ ಒಂದಾಗಿದೆ. ಸಾಮಾನ್ಯವಾಗಿ ಪುರುಷರಲ್ಲಿ ಬಾಯಿ ಕ್ಯಾನ್ಸರ್, ಶ್ವಾಶಕೋಶ ಕ್ಯಾನ್ಸರ್, ಅನ್ನನಾಳ ಕ್ಯಾನ್ಸರ್ ಹಾಗೂ ಮಹಿಳೆಯರಲ್ಲಿ ಗರ್ಭಕಂಠದ ಕ್ಯಾನ್ಸರ್, ಸ್ತನ ಕ್ಯಾನ್ಸರ್, ಬಾಯಿ ಕ್ಯಾನ್ಸರ್ ಬರುವ ಸಾಧ್ಯತೆ ಇರುತ್ತದೆ. ವಾಸಿಯಾಗದ ಗಾಯಾ, ಅಸಹಜ ರಕ್ತಸ್ರಾವ, ಬಹಳದಿನಗಳ ಕೆಮ್ಮು, ಬಹಳದಿನಗಳ ಧ್ವನಿ, ನೋವಿಲ್ಲದ ಗಡ್ಡೆ ಅಥವಾ ಊತ ಇವು ಕ್ಯಾನ್ಸರ್ ರೋಗದ ಲಕ್ಷಣಗಳಾಗಿದ್ದು, ಇವುಗಳ ಬಗ್ಗೆ ನಿರ್ಲಕ್ಷ್ಯ ಮಾಡದೇ ಸಮೀಪದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ, ವೈದ್ಯರ ಹತ್ತಿರ ಪರೀಕ್ಷಿಸಿಕೊಂಡು ಚಿಕಿತ್ಸೆ ಪಡೆದುಕೊಳ್ಳುವಂತೆ ಸಾರ್ವಜನಿಕರಿಗೆ ಅರಿವು ಮೂಡಿಸಬೇಕು. ಅಲ್ಲದೇ ಕ್ಯಾನ್ಸರ್ ಲಕ್ಷಣಗಳು ಕಂಡುಬರುವವರು ಮುಂಜಾಗೃತೆ ಕ್ರಮವಾಗಿ ಆರೋಗ್ಯಕರ ಜೀವನ ಶೈಲಿ ನಡೆಸಬೇಕು. ಸಿರಿದಾನ್ಯಗಳಿಂದ ತಯಾರಿಸಿದ ಆಹಾರ ಸೇವನೆ, ಬಣ್ಣಗಳಿಂದ ಕೂಡಿದ ಆಹಾರ ಪದಾರ್ಥಗಳಾದ ಬೇಕರಿ ಪದಾರ್ಥ, ಗೋಬಿ, ಮುಂತಾದವುಗಳನ್ನು ಹೆಚ್ಚಾಗಿ ಬಳಕೆ ಮಾಡಬಾರದು. ಇದರ ಬದಲಿಗೆ ಹಾಲು & ಹಾಲಿನ ಉತ್ಪನಗಳ ಹೆಚ್ಚು ಬಳಕೆ ಮಾಡುವುದು, ಕ್ಯಾನ್ಸರ್ ಪ್ರತಿರೋಧಕ ಶಕ್ತಿಯಿರುವ ಆಹಾರ ಪದಾರ್ಥಗಳ ಬಳಕೆ, ಆಹಾರದಲ್ಲಿ ಹೆಚ್ಚಿನ ರೀತಿಯ ತರಕಾರಿ, ಹಣ್ಣು ಹಂಪಲುಗಳ ಬಳಕೆ ಮಾಡುವ ಬಗ್ಗೆ ಎಲ್ಲಾ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿಗಳು ತಮ್ಮ ಕಾರ್ಯಕ್ಷೇತ್ರದ ವ್ಯಾಪ್ತಿಯ ಜನರಿಗೆ ಸೂಕ್ಷ್ಮವಾಗಿ ಅರ್ಥೈಸಬೇಕೆಂದರು.



ಕೊಪ್ಪಳ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ನಂದಕುಮಾರ ಅವರು ಪ್ರಸ್ತಾವಿಕವಾಗಿ ಮಾತನಾಡಿ, ಜೀವನಶೈಲಿಯಿಂದ ಬರುವ ಅಸಾಂಕ್ರಾಮಿಕ ರೋಗಗಳಲ್ಲಿ ಕ್ಯಾನ್ಸರ್ ಖಾಯಿಲೆ ಒಂದಾಗಿದ್ದು, "ವಿಶಿಷ್ಟತೆಯಿಂದ ಏಕತೆ" ಎಂಬ ಈ ವರ್ಷ ಘೋಷವಾಖ್ಯ ದೊಂದಿಗೆ ಕ್ಯಾನ್ಸರ್ ಖಾಯಿಲೆ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಚರಿಸಲಾಗುತ್ತಿದೆ. ಆರೋಗ್ಯ ಇಲಾಖೆಯಲ್ಲಿ ಮುಂಬರುವ ಮಾರ್ಚ್ ತಿಂಗಳಿಂದ 30 ವರ್ಷ ಮೇಲ್ಪಟ್ಟ ಎಲ್ಲರಿಗೂ ಗೃಹ ಆರೋಗ್ಯ ಯೋಜನೆಯಡಿಯಲ್ಲಿ ಉಚಿತವಾಗಿ ಬಾಯಿ ಕ್ಯಾನ್ಸರ್, ಗರ್ಭಕಂಠದ ಕ್ಯಾನ್ಸರ್ ಹಾಗೂ ಮಾನಸಿಕ ರೋಗಿಗಳಿಗೆ ಪ್ರಾಥಮಿಕ ತಪಾಸಣೆ ಮಾಡಿ, ಚಿಕಿತ್ಸೆ ನೀಡಲಾಗುವುದು. ಜತೆಗೆ ಮಧುಮೇಹ ಮತ್ತು ಅಧಿಕ ರಕ್ತದೊತ್ತಡವನ್ನು ಸಹ ಪರೀಕ್ಷಿಸಿ, ಚಿಕಿತ್ಸೆ ನೀಡಿ, ಅನುಸರಣೆ ಮಾಡಲಾಗುತ್ತದೆ. ಒಟ್ಟಾರೆಯಾಗಿ ಉತ್ತಮವಾದ ಆರೋಗ್ಯಕರ ಜೀವನ ಶೈಲಿಯಿಂದ ಅಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಬಹುದಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕುಟುಂಬ ಕಲ್ಯಾಣಾಧಿಕಾ ಡಾ.ರವೀಂದ್ರನಾಥ್ ಎಂ.ಹೆಚ್, ಜಿಲ್ಲಾ ರೋಗವಾಹ ಆಶ್ರಿತ ರೋಗಗಳ ನಿಯಂತ್ರಣ ಅಧಿಕಾರಿ ಡಾ.ವೆಂಟಕೇಶ, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ಪ್ರಕಾಶ ಹೆಚ್., ಕೊಪ್ಪಳ ವೈದ್ಯಕೀಯ ಮಹಾವಿದ್ಯಾಲಯದ (ಕೀಮ್ಸ್) ಸಹಾಯಕ ಪ್ರಾಧ್ಯಾಪಕರಾದ ಡಾ.ಸುರೇಖಾ, ಗದಗ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರು, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ ಡಾ.ರಾಜು, ಪಬ್ಲಿಕ್ ಪ್ರಾಸಿಕ್ಯೂಟರಾದ ಗೌರಮ್ಮ ದೇಸಾಯಿ ಸೇರಿದಂತೆ ಮಹಿಳಾ ತಜ್ಞವೈದ್ಯರು, ಆರೋಗ್ಯ ಶಿಕ್ಷಣಾಧಿಕಾರಿಗಳು, ಎನ್.ಸಿ.ಡಿ ಕಾರ್ಯಕ್ರಮದ ಜಿಲ್ಲಾ ಸಲಹೆಗಾರರು, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳು ಹಾಗೂ ಶುಶೂಷಾಧಿಕಾರಿಗಳು ಇತರೆ ಸಿಬ್ಬಂದಿಗಳು ಉಪಸ್ಥಿತರಿದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ಪರ್ವತಗಳೆಲ್ಲ ನೆಲಸಮವಾಗಿದ್ದರೆ.....

ಬೇಸಿಗೆ ರಜೆಯಲ್ಲಿ ಪ್ರತಿದಿನ ಮಧ್ಯಾಹ್ನ ಪದ್ಮಾವತಿ ತನ್ನ ದೊಡ್ಡಪ್ಪನೊಂದಿಗೆ ಹರಟುತ್ತಾ ಕುಳಿತುಕೊಳ್ಳುತ್ತಿದ್ದಳು. ಅವಳು ಕೆಲವು ಕುತೂಹಲದ ಪ್ರಶ್ನೆಗಳನ್ನು ಕೇಳುತ್ತಾ ದೊಡ್ಡಪ್ಪನಿಂದ ಉತ್ತರ ಪಡೆಯುತ್ತಿದ್ದಳು. ಒಂದು ದಿನ ಭೂಸ್ವರೂಪಗಳ ಬಗ್ಗೆ ಹರಟೆ ಪ್ರಾರಂಭವಾಗಿತ್ತು. ಪರ್ವತಗಳ ಬಗ್ಗೆ ಚರ್ಚಿಸುವಾಗ ಅವಳು ತುಂಬಾ ಉತ್ಸುಕಳಾದಳು. ಅನೇಕ ಪ್ರಶ್ನೆಗಳನ್ನು ಕೇಳುತ್ತಾ ಸಾಗಿದಳು. ಅದರಲ್ಲಿ ಅವಳ ಒಂದು ಪ್ರಶ್ನೆ ದೊಡ್ಡಪ್ಪನನ್ನೇ ದಂಗು ಬಡಿಸಿತು. ಹೀಗೆ ದಂಗುಬಡಿಸಿದ ಪದ್ಮಾವತಿಯ ಪ್ರಶ್ನೆ ಏನೆಂದರೆ "ಪರ್ವತಗಳೆಲ್ಲ ನೆಲಸಮವಾಗಿದ್ದರೆ ಏನಾಗ್ತಿತ್ತು?" ಅವಳ ಪ್ರಶ್ನೆಯ ವಿಷಯವೇ ಈ ಅದ್ಯಾಯ.

ಪರ್ವತ ಎಂದರೆ,,,, : ಪದ್ಮಾವತಿಯ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಮೊದಲು ಪರ್ವತಗಳ ಬಗ್ಗೆ ಒಂದಿಷ್ಟು ಮಾಹಿತಿ ತಿಳಿದುಕೊಳ್ಳೋಣ. ಪರ್ವತಗಳು ಈ ಜಗತ್ತಿನ ವಿಸ್ಮಯ ಹಾಗೂ ಸ್ಫೂರ್ತಿದಾಯಕ ಭೂಸ್ವರೂಪಗಳಾಗಿವೆ. ಭೂರಮೆಗೆ ಸೌಂದರ್ಯ ಹಾಗೂ ಘನತೆಯನ್ನು ತಂದುಕೊಡುವಲ್ಲಿ ಪರ್ವತಗಳ ಪಾತ್ರ ಹಿರಿದು. ಅತೀ ಹೆಚ್ಚು ಸಂಕಷ್ಟಗಳನ್ನು ಸಹಿಸಿಕೊಂಡು ಉನ್ನತ ಹಂತಕ್ಕೆ ಬೆಳೆದವರನ್ನು ಪರ್ವತಕ್ಕೆ ಹೋಲಿಸಲಾಗುತ್ತದೆ. ಪರ್ವತಗಳ ಮಹತ್ವ ಇಷ್ಟಕ್ಕೆ ನಿಲ್ಲುವುದಿಲ್ಲ. ಅದೆಲ್ಲವನ್ನು ಇಲ್ಲಿ ಹೇಳಲು ಅವಕಾಶವೂ ಇಲ್ಲ. ಕಾಲ ಮತ್ತು ಅವಶ್ಯಕತೆಗಳು ದೊರೆತಾಗ ಎಲ್ಲವನ್ನು ನೀವೇ ತಿಳಿದುಕೊಳ್ಳಬಹುದು. ಈಗ ಪರ್ವತಗಳೆಂದರೆ ಏನು ಎಂಬುದನ್ನು ಚರ್ಚಿಸಿ ಮುಂದೆ ಸಾಗೋಣ.



ಆರ್.ಬಿ.ಗುರುಬಸವರಾಜ
ಶಿಕ್ಷಕರು, ಹ.ಬೊ.ಹಳ್ಳಿ

Scan For Digital Colourful
HAMPI TIMES E-paper

ಸುತ್ತಲಿನ ಸಾಮಾನ್ಯ ಭೂಭಾಗಕ್ಕಿಂತ ಸ್ವಲ್ಪ ಎತ್ತರವಾದ ಶಿಖರದ ರೀತಿಯ ಮೇಲ್ಮೈ ಪ್ರದೇಶವನ್ನು ಪರ್ವತ ಎನ್ನುತ್ತಾರೆ. ಪರ್ವತಗಳು ಕಡಿದಾದ ಇಳಿಜಾರು ಹಾಗೂ ಚಿಕ್ಕ ಶಿಖರಗಳನ್ನು ಹೊಂದಿದ್ದು, ಸಮುದ್ರಮಟ್ಟಕ್ಕಿಂತ 1000 ಮೀ ಎತ್ತರದಲ್ಲಿರುತ್ತವೆ. ಪರ್ವತಗಳ ಬಗೆಗಿನ ಅಧ್ಯಯನವನ್ನು ಆರಾಗ್ರಫಿ ಎಂದು ಕರೆಯಲಾಗುತ್ತದೆ. ಪರ್ವತಗಳು ಸಾಮಾನ್ಯವಾಗಿ ಭೂಪದರದ ಚಲನೆಯಿಂದ ರಚನೆಯಾಗುತ್ತದೆ. ಸಾಮಾನ್ಯವಾಗಿ ಜ್ವಾಲಾಮುಖಿಯಿಂದ ಭೂಮೇಲ್ಮೈಯ ಶಿಲಾಪದರ ಮೇಲಕ್ಕೆ ತಳ್ಳಲ್ಪಟ್ಟು ಪರ್ವತಗಳು ನಿರ್ಮಾಣಗೊಳ್ಳುತ್ತವೆ. ಭೂಮಿಯ ಶೇ.22 ಭಾಗವನ್ನು ಪರ್ವತಗಳು ಆವರಿಸಿವೆ. ಪರ್ವತಗಳ ಗುಣಲಕ್ಷಣಗಳು ಹಾಗೂ ಭೌಗೋಳಿಕ ಕ್ರಿಯೆಯ ಆಧಾರದ ಮೇಲೆ ಮಡಿಕೆ ಪರ್ವತ, ಖಂಡ ಪರ್ವತ, ಜ್ವಾಲಾಮುಖಿ ಪರ್ವತ ಹಾಗೂ ಶೇಷ ಪರ್ವತಗಳೆಂದು ನಾಲ್ಕು ವಿಧಗಳಲ್ಲಿ ವಿಂಗಡಿಸಲಾಗಿದೆ. ಪರ್ವತಗಳು ಭೂಗ್ರಹದಲ್ಲಷ್ಟೆ ಅಲ್ಲ ಇನ್ನಿತರೇ ಗ್ರಹಗಳಲ್ಲೂ ಇವೆ. ಹಿಮಾಲಯ ಪರ್ವತ (29028 ಮೀ) ಪ್ರಪಂಚದ ಅತೀ ಎತ್ತರದ ಪರ್ವತವಾದರೆ, ಆಂಡೀಸ್ ಪರ್ವತ (8800ಕಿ.ಮಿ) ಅತ್ಯಂತ ಉದ್ದವಾದ ಪರ್ವತವಾಗಿದೆ. ನಮ್ಮ ಸೌರವ್ಯೂಹದ ಅತ್ಯಂತ ಎತ್ತರವಾದ ಪರ್ವತ ಒಲಿಂಪಸ್ ಮಾನ್ಸ್ (21171 ಮೀ) ಮಂಗಳ ಗ್ರಹದಲ್ಲಿದೆ.

**ಹೆಮ್ಮೆಯ ಹಿಮಾಲಯ ರೂಪಗೊಂಡದ್ದು,,,**

ಏಳುಕೋಟಿ ವರ್ಷಗಳ ಹಿಂದೆ ಭಾರತ ಮತ್ತು ಯುರೇಷ್ಯ ಫಲಕಗಳು ಎದುರುಬದುರಾಗಿ ನಡೆಉವೆ ಇದ್ದ ಟೆಥಿಸ್ ಸಾಗರವನ್ನು ಹಿಚುಕಿದವು. ಆಗ ಅದರೊಳಗಿದ್ದ ಸ್ತರಶಿಲೆಗಳು ಮೇಲೇಳಲು ಪ್ರಾರಂಭಿಸಿದವು. ಐದು ಹಂತಗಳಲ್ಲಿ ನಮ್ಮ ಹಿಮಾಲಯ ರೂಪುಗೊಂಡಿತು. ಅದು ಕೊನೆಯ ಹಂತದಲ್ಲಿ ತಲೆ ಎತ್ತಿ ನಿಲ್ಲುವ ವೇಳೆಗೆ ಭೂಮಿಯ ಮೇಲೆ ಮಾನವ ಕಾಣಿಸಿಕೊಂಡ. ಅಂದು ಪ್ರಾರಂಬವಾದ ಹಿಮಾಲಯದ ಫಲಕಗಳ ಘರ್ಷಣೆ ಈಗಲೂ ನಿಂತಿಲ್ಲ. ಮಡಿಕೆ ಮಡಿಕೆಗಳಿಂದ ಕೂಡಿದ ಹಿಮಾಲಯ ಪ್ರತಿವರ್ಷ ಕೆಲವು ಸೆಂಟಿಮೀಟರ್‌ನಷ್ಟು ಮೇಲೇಳುತ್ತದೆ ಎಂದು ವಿಜ್ಞಾನಿಗಳು ಲೆಕ್ಕಿಸಿದ್ದಾರೆ.

**ಪರ್ವತಗಳು ನೆಲಸಮವಾದರೆ ,,,,,,**

ಪರ್ವತಗಳು ವಿಶ್ವದ ಲಕ್ಷಾಂತರ ಜನರಿಗೆ ನೀರು ಮತ್ತು ಆಹಾರ ಒದಗಿಸುತ್ತವೆ. ವಿಶ್ವದ ಜನಸಂಖ್ಯೆಯ ಶೇ.13 ರಷ್ಟು ಜನರು ಪರ್ವತ ಪ್ರದೇಶಗಳಲ್ಲಿ ವಾಸಿಸಿಲುತ್ತಾರೆ. ಪರ್ವತಗಳು ನಾಶವಾದರೆ ಇಷೊಂದು ಪ್ರಮಾಣದ ಜನರಿಗೆ ವಸತಿ ಸೌಲಭ್ಯ ಒದಗಿಸುವುದು ಹೇಗೆ? ಎಂಬ ಮತ್ತೊಂದು ಸಮಸ್ಯೆ ಉದ್ಭವಿಸುತ್ತದೆ. ಪರ್ವತಗಳು ಜಗತ್ತಿನ ಶೇಕಡಾ 60–80 ರಷ್ಟು ಶುದ್ಧ ಕುಡಿಯುವ ನೀರನ್ನು ಒದಗಿಸುತ್ತವೆ. ಅದರಲ್ಲೂ ಭಾರತದ ಹಿಮಾಲಯ ಪರ್ವತದಲ್ಲಿ 1500ಕ್ಕೂ ಹೆಚ್ಚು ಹಿಮನದಿಗಳಿವೆ. ಹಿಮಕರಗುವಿಕೆಯಿಂದ ಶೇ.58 ರಷ್ಟು ನೀರು ನದಿಗಳಿಗೆ ಹರಿಯುತ್ತದೆ. ಪರ್ವತಗಳು ನೆಲಸಮವಾದರೆ ಅವುಗಳಿಂದ ದೊರೆಯುವ ನೀರಿನ ಸೌಲಭ್ಯ ಮೊಟಕುಗೊಳ್ಳುತ್ತದೆ ಮತ್ತು ನೀರಿನ ಸಮಸ್ಯೆ ಉಂಟಾಗುತ್ತದೆ.

ಬಹುತೇಕ ಪರ್ವತಗಳಲ್ಲಿ ಬಿಸಿನೀರು ಮತ್ತು ಹಬೆಗಳನ್ನು ಹೊರಚಿಮ್ಮುವ ಅಸಂಖ್ಯಾತ ಚಿಲುಮೆಗಳಿವೆ. ಈ ಚಿಲುಮೆಗಳನ್ನು ಬಸರಿಯಾಗಿ ಬಳಸಿಕೊಂಡರೆ ಅವುಗಳಿಂದ ಥರ್ಮಲ್ ವಿದ್ಯುತ್ ತಯಾರಿಸಬಹುದು. ಲಡಖ್‌ನಲ್ಲಿ 34, ಹಿಮಾಚಲ ಪ್ರದೇಶದಲ್ಲಿ 34, ಕುಮಾನ್‌ನಲ್ಲಿ 37, ಸಿಕ್ಕಿಂನಲ್ಲಿ 7 ಮತ್ತು ಅರುಣಾಚಲ ಪ್ರದೇಶದಲ್ಲಿ 11, ಹೀಗೆ ನಮ್ಮ ಹಿಮಾಲಯ ಪರ್ವತದಲ್ಲಿ ಒಟ್ಟು 123 ಬಿಸಿನೀರ ಬುಗ್ಗೆಗಳಿವೆ. ಪರ್ವತಗಳು ಇಲ್ಲವಾದರೆ ಬಿಸಿನೀರ ಬುಗ್ಗೆಗಳೂ ಇಲ್ಲ, ಅವುಗಳಿಂದ ಥರ್ಮಲ್ ವಿದ್ಯುತ್ ಇಲ್ಲದಂತಾಗುತ್ತದೆ.




ಪರ್ವತಗಳು ಇಲ್ಲದಿದ್ದರೆ ಬಹುಮುಖ್ಯವಾದ ಸಸ್ಯ ಸಂಪತ್ತು ಹಾಗೂ ಮರಗಳನ್ನು ಕಳೆದುಕೊಳ್ಳುತ್ತಿದ್ದೆವು. ಬಹುತೇಕ ಪರ್ವತಗಳು ವೈವಿಧ್ಯಮಯವಾದ ಅಪಾರ ಸಸ್ಯಸಂಪತ್ತು ಹಾಗೂ ಹುಲ್ಲುಗಾವನ್ನು ಹೊಂದಿವೆ. ಕೇವಲ ಹಿಮಾಲಯ ಪರ್ವತದಲ್ಲಿಯೇ ಅಪಾರ ಹಾಗೂ ಬೆಲೆಬಾಳುವ ಸಸ್ಯಸಂಪತ್ತು ಇದೆ. ಹಿಮಾಲಯದ ಅರಣ್ಯ ಪ್ರದೇಶದಲ್ಲಿನ ಶೇ. 30 ರಷ್ಟು ವಿವಿಧ ಜಾತಿಯ ಮರ ಗಿಡಗಳು ಪ್ರಪಂಚದ ಯಾವುದೇ ಭಾಗದಲ್ಲಿಲ್ಲ ಎಂಬುದು ನಮಗೆ ಹೆಮ್ಮೆಯ ಸಂಗತಿ. ಇದರಲ್ಲಿ ಓಕ್, ಪೈನ್, ಗುಲ್ಮ, ಲಾಕುರೇಸಿಯಸ್ ಮರಗಿಡಗಳನ್ನು ಹೊಂದಿವೆ. ಪರ್ವತಗಳು ನೆಲಸಮವಾದರೆ ಇಷ್ಟೊಂದು ಪ್ರಮಾಣದ ಸಸ್ಯಸಂಪತ್ತು ನಾಶವಾಗಿ ಜೀವಿಗಳಿಗೆ ಅಪಾಯ ಒದಗುತ್ತಿತ್ತು. ಜೀವಿಗಳಿಗೆ ಶುದ್ಧಗಾಳಿ, ಮಳೆ ಹಾಗೂ ಆಹಾರಕ್ಕಾಗಿ ಸಸ್ಯಸಂಪತ್ತು ಅಗತ್ಯವಲ್ಲವೇ?

ಪರ್ವತ ಅರಣ್ಯದಲ್ಲಿ ಜೀವಿಸುವ ಪ್ರಾಣಿ, ಪಕ್ಷಿ ಸಂಕುಲಗಳಿಗೆ ಪರ್ವತವೇ ಇಲ್ಲವಾದರೆ ಅವುಗಳ ಆವಾಸಕ್ಕೆ ತೊಂದರೆಯಾಗಿ ಅವುಗಳ ಸಂತತಿ ನಶಿಸಿಹೋಗುತ್ತದೆ. ನಮ್ಮ ಹೆಮ್ಮೆಯ ಹಿಮಾಲಯ ಪರ್ವತದಲ್ಲಿ ಜಗತ್ತಿನಲ್ಲಿಯೇ ವಿಶೇಷತೆಯುಳ್ಳ ಕಂಕರ್, ಗುರಾಲ್, ಭಾರಲ್, ಹಿಮಾಲಯನ್ ಕಪ್ಪು ಕರಡಿ, ಕಸ್ತೂರಿಮೃಗ, ಹಿಮಾಲಯನ್ ತಹರ್, ಹಿಮಚಿರತೆ, ಹುಲಿ, ಆನೆ ಮುಂತಾದ ವಿವಿಧ ಜಾತಿಯ ಪ್ರಾಣಿಗಳು ಹಾಗೂ 230 ಜಾತಿಯ ವಿವಿಧ ಪಕ್ಷಿಗಳು ಇವೆ. ಪರ್ವತಗಳು ಇಲ್ಲವಾದರೆ ಈ ಎಲ್ಲಾ ಪ್ರಾಣಿ, ಪಕ್ಷಿಗಳು ಅವನತಿ ಹೊಂದುತ್ತವೆ.

ಪರ್ವತಗಳು ನೆಲಸಮವಾದರೆ ಹವಾಮಾನ ವೈಪರೀತ್ಯಗಳು ಉಂಟಾಗುತ್ತವೆ. ಬಿರುಗಾಳಿಯ ಪ್ರಮಾಣ ಹೆಚ್ಚಾಗುತ್ತದೆ. ಪರ್ವತಗಳ ಅಂಚಿನಲ್ಲಿನ ಪ್ರದೇಶಗಳು ಬಿರುಗಾಳಿಗೆ ನಲುಗಿ ಹೋಗುತ್ತವೆ. ಸಕಾಲದಲ್ಲಿ ಮಳೆ ಬರುವುದಿಲ್ಲ. ಇದರಿಂದ ಆ ಪ್ರದೇಶಗಳೆಲ್ಲ ಕುಡಿಯುವ ನೀರಿನ ಸಮಸ್ಯೆ ಅನುಭವಿಸುವಂತಾಗುತ್ತದೆ. ಶುದ್ಧಗಾಳಿ, ನೀರು, ವಾತಾವರಣ ಇಲ್ಲದೇ ಪರ್ವತ ಪ್ರದೇಶಗಳಲ್ಲಿ ವಾಸಿಸುವ 329 ಮಿಲಿಯನ್ ಜನರು ಆಹಾರವಿಲ್ಲದೇ ಅವರ ಜೀವನ ತೊಂದರೆಗೀಡಾಗುತ್ತದೆ. ಅದರಲ್ಲಿ ಕೆಲವು ಜನರು ಸಾಯಲೂಬಹುದು.

ಸಾವಿರಾರು ವರ್ಷಗಳಿಂದ ಭುಮಿಗೆ ಆಶ್ರಯವಾಗಿರುವ ಪರ್ವತಗಳನ್ನು ನೆಲಸಮಗೊಳಿಸಿದರೆ ಭೂಗ್ರಹಕ್ಕೆ ಗಂಡಾಂತರ ಸಂಭವಿಸಬಹುದು. ಪರ್ವತಗಳು ನಾಶವಾದರೆ ಇಡೀ ಭೂಮಿ ಜಾಗತಿಕ ತಾಪಮಾನವನ್ನು ಎದುರಿಸಬೇಕಾಗುತ್ತದೆ. ವರ್ಷದುದ್ದಕ್ಕೂ ಹರಿಯುವ ಪರ್ವತ ನದಿಗಳ ನೀರು ನದಿ ಪಾತ್ರದ ಭುಮಿಯೆಲ್ಲ ಮರುಭೂಮಿಯಾಗಬಹುದು. ಭೂಮಿಯು ತನ್ನ ಈಗಿನ ವಾತಾವರಣ ಕಳೆದುಕೊಂಡು ಎಲ್ಲವೂ ಶಿಲೆಯಾಗಿ ಮಾರ್ಪಾಟಾಗಬಹುದು. ಭೂಮಿಯ ಮೇಲಿನ ಬಹುತೇಕ ಜನಜೀನವ ಅಸ್ತವ್ಯಸ್ತವಾಗುತ್ತದೆ.

ಪರ್ವತಗಳು ಇಲ್ಲವಾದರೆ 'ಪರ್ವತಾರೋಹಿಗಳು' ಎಂಬ ಪದವನ್ನು ಶಬ್ದಕೋಶದಿಂದ ತೆಗೆದುಹಾಕಬೇಕಾಗುತ್ತದೆ. ಪರ್ವತಾರೋಹಿಗಳು ಮತ್ತು ಓಲಂಪಿಕ್ ಸ್ಕೀಯರ್‌ಗಳು ಸವಾಲುಗಳನ್ನು ಎದುರಿಸಲು ಪರ್ವತಗಳಲ್ಲೇ ಅಭ್ಯಾಸ ಮಾಡುತ್ತಾರೆ. ಪರ್ವತಗಳೇ ಇಲ್ಲವಾದರೆ ಅವರು ಏನು ಮಾಡಬೇಕು? ಪರ್ವತಗಳು ಸುಂದರವಾದ ದೃಶ್ಯವನ್ನು ಕಣ್ಣಿಗೆನೀಡುತ್ತವೆ.ಪರ್ವತಗಳನ್ನೆತಮ್ಮಕಲೆಯಜೀವಾಳವನ್ನಾಗಿಸಿಕೊಂಡ ಕವಿಗಳು, ಬರಹಗಾರರು, ಲೇಖಕರು, ಚಿತ್ರಕಾರರು, ಫೋಟೋಗ್ರಾಫರ್‌ಗಳು ಎಲ್ಲಿ ಹೋಗಬೇಕು? ಅಲ್ಲವೇ? ಪರ್ವತಗಳು ಭೂಮಿಗೆ ತಂಪನ್ನು ನೀಡುತ್ತವೆ. ಒಂದು ವೇಳೆ ಅವು ಇಲ್ಲದಿದ್ದರೆ ಬೇಸಿಗೆಯು ಅತೀ ಬಿಸಿಯಿಂದ ಕೂಡಿರುತ್ತಿತ್ತು. ವರ್ಷಪೂರ್ತಿ ನಡೆಯುವ ಟ್ರಕ್ಕಿಂಗ್, ಬೈಕಿಂಗ್, ಫಿಶಿಂಗ್, ಸ್ಕೀಯಿಂಗ್, ಸ್ನೋಬೋರ್ಡಿಂಗ್, ಸ್ಲೈಡಿಂಗ್‌ನಂತಹ ಕ್ರೀಡೆಗಳು ಇರುತ್ತಿರಲಿಲ್ಲ.

ಪರ್ವತಗಳು ಅಪಾರ ಖನಿಜ ಸಂಪತ್ತಿನ ಆಗರಗಳು. ನಮ್ಮ ಹಿಮಾಲಯದಲ್ಲೂ ಬೆಲೆಬಾಳುವ ಅಪಾರ ಖನಿಜ ಸಂಪತ್ತು ಮತ್ತು ಖನಿಜ ನಿಕ್ಷೇಪಗಳಿವೆ. ಮಾಗ್ನಸೈಟ್, ಡೋಲೋಮೈಟ್, ಸಿಮೆಂಟ್ ದರ್ಜೆಯ ಸುಣ್ಣದ ಕಲ್ಲು, ರೂಫಿಂಗ್ ಸ್ಲೇಟ್, ನೆಲಗಟ್ಟು ಕಲ್ಲು ಮತ್ತಿ ಜಿಪ್ಸಂ ನಿಕ್ಷೇಪಗಳಿವೆ. ಇವುಗಳಲ್ಲದೇ ಅಲ್ಪ ಪ್ರಮಾಣದಲ್ಲಿ ಸ್ವೀಟೈಟ್, ಟಾಲ್ಕ, ಪಾಸ್ಫೋರೈಟ್, ಲಿಗ್ನೈಟ್, ಕಲ್ಲುಪ್ಪು, ಬೇಸ್ ಮೆಟಲ್‌ನಂತಹ ಕೆಲವು ಖನಿಜಗಳೂ ಸಹ ದೊರೆಯುತ್ತವೆ. ಹೀಗೆ ಪರ್ವತಗಳಿಂದ ಸಾಕಷ್ಟು ಖನಿಜಗಳು ದೊರೆಯುತ್ತವೆ. ಪರ್ವತಗಳು ಇಲ್ಲವಾದರೆ ಈ ಖನಿಜಗಳು ಬಳಕೆಗೆ ದೊರಕಲಾರವು. ಈಗ ಹೇಳಿ ಪರ್ವತಗಳು ನಮಗೆ ಬೇಕೋ? ಬೇಡವೋ? ಬೇಕು ಎನ್ನುವುವದಾರೆ ಅವುಗಳನ್ನು ಉಳಿಸಿಕೊಂಡು ನಮ್ಮನ್ನು ರಕ್ಷಿಸಿಕೊಳ್ಳೋಣವೇ?

---


## ಕವಿ ಮನಸು

### ಜಿಪುಣ

ಆಗಿದ್ದರವರು ಬಹಳ ಜಿಪುಣ
ದುಡ್ಡು ಕೂಡಿಡುವುದರಲ್ಲಿ ನಿಪುಣ
ಹರಿಯ ಕೃಪೆಯಿಂದ ಕಳೆಯಿತು ದುರ್ಗುಣ
ಪುರಂದರರು ದಾಸಶ್ರೇಷ್ಠರಾದ ಕ್ಷಣ

ಹಾಡುತ ಎಲ್ಲೆಡೆ ಹರಿನಾಮ ಕೀರ್ತನ
ಪಾಡುತ ಭಗವಂತನ ಲೀಲೆಯ ಕ್ಷಣ
ಜ್ಞಾನಸುಧೆಯ ಹರಿಸುತ ನಡೆಸಿದರು
ಮಥನ
ಸಂಗೀತ ಪಿತಾಮಹನಿಗೆ ಇದೋ ನಮ್ಮ
ನಮನ

– ಚೇತನ ಭಾರ್ಗವ, ಬೆಂಗಳೂರು



## ತುಂಗಭದ್ರಾ ನೀರಿನ ಮಟ್ಟ

ಶುಕ್ರವಾರ : 07–02–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1614.98 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 7227 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 48.363 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1588.09 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 272 ಕ್ಯುಸೆಕ್ |
| ಸಾಮರ್ಥ್ಯ | 9.508 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಕ್ರೋಧಿ

08–02–2025 – ಶನಿವಾರ

| | |
|---|---|
| ತಿಥಿ | : ಏಕಾದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಮೃಗಶಿರ |
| ಯೋಗ | : ವೈಧೃತಿ |
| ಕರಣ | : ವಾಣಿಜ |
| ಸೂರ್ಯೋದಯ | : 07:04:46 |
| ಸೂರ್ಯಾಸ್ತ | : 18:17:43 |
| ರಾಹು ಕಾಲ | : 09:53–11:17 |
| ಯಮಘಂಡ ಕಾಲ | : 14:05–15:29 |
| ಗುಳಿಕ ಕಾಲ | : 07:05–08:29 |

---

## ಫೆ.17 ರಿಂದ ಫೆ.24 ರವರೆಗೆ ರಸ್ತೆ ಸಂಚಾರ ಗಣತಿ ಸಪ್ತಾಹ ಆರಂಭ

■ ಹಂಪಿ ಟೈಮ್ಸ್ ಹೊಸಪೇಟೆ

ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಮೇಲೆ ಗಣತಿ ಕೇಂದ್ರಗಳನ್ನು ಆರಂಭಿಸಿ ರಸ್ತೆ ಸಂಚಾರ ಗಣತಿ ಸಪ್ತಾಹವನ್ನು ಫೆ.17 ರಿಂದ ಫೆ.24 ರವರೆಗೆ ಹಮ್ಮಿಕೊಳ್ಳಲಾಗಿರುತ್ತದೆ ಎಂದು ಬಳ್ಳಾರಿ ವೃತ್ತ ಲೋಕೋಪಯೋಗಿ ಇಲಾಖೆ ಅಧೀಕ್ಷಕ ಇಂಜಿನಿಯರ್ ತಿಳಿಸಿದ್ದಾರೆ.

ಪ್ರತಿ ವರ್ಷಕ್ಕೊಮ್ಮೆ ಎರಡು ದಿನ ಮತ್ತು ಐದು ವರ್ಷಗಳಿಗೊಮ್ಮೆ ಏಳು ದಿನಗಳ ರಾಜ್ಯ ಹೆದ್ದಾರಿಗಳು, ಜಿಲ್ಲಾ ಮುಖ್ಯ ರಸ್ತೆಗಳ ಮೇಲೆ ವಾಹನ ಸಂಚಾರ ಗಣತಿ ಕಾರ್ಯವನ್ನು ಕೈಗೊಳ್ಳಲಾಗುತ್ತದೆ. ಈ ಗಣತಿಯಿಂದ ಸಂಗ್ರಹಿಸಿದ ಮಾಹಿತಿಯಿಂದ ಸರ್ಕಾರಕ್ಕೆ ರಸ್ತೆಗಳ ಸಂಚಾರ ಸಾಂದ್ರತೆ, ರಸ್ತೆಗಳ ವಿಸ್ತರಣೆ ನಿರ್ಧರಿಸಲು, ರಸ್ತೆಗಳನ್ನು ಮೇಲ್ದರ್ಜೆಗೇರಿಸಲು, ರಸ್ತೆಗಳ ಸ್ಥಿತಿಗತಿ ಸುಧಾರಿಸಲು ಅನುಕೂಲವಾಗುತ್ತದೆ ಎಂಬ ನಿಟ್ಟಿನಲ್ಲಿ ಸಮೀಕ್ಷೆ ಕಾರ್ಯವನ್ನು ನಡೆಸಲಾಗುತ್ತದೆ.

ಆದ್ದರಿಂದ ಫೆ.17 ರ ಬೆ.6 ಗಂಟೆಯಿಂದ ಫೆ.24 ರ ಬೆ.6 ಗಂಟೆಯವರೆಗೆ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಸಂಚರಿಸುವ ಎಲ್ಲಾ ವಾಹನಗಳ ಚಾಲಕರು ಗಣತಿ ಕೇಂದ್ರಗಳಿದ್ದಲ್ಲಿ ತಮ್ಮ ವಾಹನಗಳನ್ನು ನಿಧಾನವಾಗಿ ಚಲಾಯಿಸಲು ತಿಳಿಸಲಾಗಿದೆ.

## ಪ್ರವಾಸೋದ್ಯಮ ಉದ್ಯಮಶೀಲತಾ ತರಬೇತಿಗೆ ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟ : ಆಕ್ಷೇಪಣೆಗೆ ಅವಕಾಶ

■ ಹಂಪಿ ಟೈಮ್ಸ್ ಹೊಸಪೇಟೆ

ಎಸ್‌ಸಿಎಸ್‌ಪಿ, ಟಿಎಸ್‌ಪಿ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಣ್ಣ ಉದ್ಯಮಿದಾರರಿಗೆ ಉದ್ಯಮಶೀಲತೆ ತರಬೇತಿ ಹಾಗೂ ಅಭ್ಯರ್ಥಿಗಳಿಗೆ ಮೊಬೈಲ್ ಕ್ಯಾಂಟೀನ್ ನಡೆಸಲು ಸಹಾಯಧನ ನೀಡಲು ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿದೆ ಎಂದು ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕ ಪ್ರಭುಲಿಂಗ.ಎಸ್.ತಳಕೇರಿ ತಿಳಿಸಿದ್ದಾರೆ.

ತರಬೇತಿ ಪಡೆದ ಅಭ್ಯರ್ಥಿಗಳಿಗೆ ಮೊಬೈಲ್ ಕ್ಯಾಂಟೀನ್ ನಡೆಸಲು ಸಹಾಯಧನ ನೀಡಲು ವಿಜಯನಗರ ಜಿಲ್ಲೆಗೆ ನಿಗಧಿಪಡಿಸಿರುವ ಗುರಿಗಳಂತೆ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಉಪ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಲೋಟಸ್ ಮಹಲ್ ಹತ್ತಿರ, ಕಮಲಾಪುರ ಕಚೇರಿಯಲ್ಲಿ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿರುತ್ತದೆ. ಆಕ್ಷೇಪಣೆಗಳು ಇದ್ದಲ್ಲಿ ಫೆ.7 ರಿಂದ ಫೆ.11 ರೊಳಗಾಗಿ ಕಚೇರಿಗೆ ಸಲ್ಲಿಸುವಂತೆ ತಿಳಿಸಿದೆ. ಮಾಹಿತಿಗೆ ದೂ.ಸಂಖ್ಯೆ 08394295640ಗೆ ಸಂಪರ್ಕಿಸಬಹುದು.

## ಫೆ.11ರಂದು ಜೆಸ್ಕಾಂ ಗ್ರಾಹಕರ ಕುಂದು ಕೊರತೆ ಸಭೆ

■ ಹಂಪಿ ಟೈಮ್ಸ್ ಹೊಸಪೇಟೆ

ಕಾರ್ಯ ಮತ್ತು ಪಾಲನೆ ನಗರ ವಿಭಾಗದ ಕಚೇರಿಯಲ್ಲಿ ಫೆ.11 ರಂದು ಬೆಳಗ್ಗೆ 11 ಗಂಟೆಗೆ ಹೆಚ್.ಟಿ, ಇ.ಹೆಚ್.ಟಿ ಗ್ರಾಹಕರ ಕುಂದುಕೊರತೆ ಸಭೆಯನ್ನು ಬಳ್ಳಾರಿ ವೃತ್ತ ಕಚೇರಿ ಇವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಹೆಚ್.ಟಿ, ಇ.ಹೆಚ್.ಟಿ ಗ್ರಾಹಕರು ಸಭೆಗೆ ಭಾಗವಹಿಸಿ ತಮ್ಮ ಕುಂದುಕೊರತೆಗಳನ್ನು ಬಗೆಹರಿಸಿ ಕೊಳ್ಳಬೇಕೆಂದು ಕಾರ್ಯ ಮತ್ತು ಪಾಲನಾ ನಗರ ವಿಭಾಗ ಕಾರ್ಯ ನಿರ್ವಾಹಕ ಅಭಿಯಂತರರು ಪ್ರಕಟಣೆ ಯಲ್ಲಿ ತಿಳಿಸಿದ್ದಾರೆ.

---

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ

HAMPI TIMES MARGADARSHI

ಈಗಿಂದಲೇ ಪುನರ್‌ಮನನ ಮಾಡಿ

ಪರೀಕ್ಷೆಗೆ ನಾವು ಸಿದ್ಧ 41 ದಿನ

ಮನಸ್ಸು ಮಾಡು-ಕರ್ತವ್ಯ ನಿಷ್ಠನಾಗು-ಕಾದು ನೋಡು

https://epaper.hampitimes.com

ನಿನ್ನ ಏಳಿಗೆಗೆ ನೀನೆ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಹಿಂದಿ

### 10 ನೇ ತರಗತಿ ಮಾದರಿ ಉತ್ತರ - ಪತ್ರಿಕೆ ಹಿಂದಿ

**I. निम्नलिखित प्रथम दो शब्दों के सूचित संबंधों के अनुरूप तीसरे शब्द का संबंधित शब्द लिखिए: 4x1=4**

1) बसंत : अहीर टीला:: पंडित राजकिशोर :---- ( किशनगंज )

2)गिल्लू :रेखाचित्र :: ईमानदारों के सम्मेलन में : -- ( व्यंग्य रचना )

3) जैनुलाबदीन :आशियम्मा :: जलालुद्दीन : ---- ( जोहरा )

4) कृष्ण को चिढानेवाले : बलराम :: चुटकी देकर हँसनेवाले : ---- ( ग्वाल मित्र )

**II. निम्नलिखित प्रश्नों के उत्तर एक -एक वाक्य में लिखिए : 4 x 1 = 4**

5) प्रेमचंद जी चौक में क्यों गये थे ?

**उत्तर : दो- चार जरूरी चीजें खरीदने के लिए** प्रेमचंद जी चौक में गये थे |

6)लेखक पहनने के कपडे कहाँ दबाकर सोये ?

**उत्तर :**लेखक पहनने के कपड़े **सिरहाने के नीचे** दबाकर सोये |

7)तुलसीदास जी के अनुसार विपत्ति के साथी कौन है ?

**उत्तर :**तुलसीदास जी के अनुसार विपत्ति के साथी **विद्या, विनय और विवेक** है |

8) आज की दुनिया कैसी है ?

**उत्तर :** आज की दुनिया **विचित्र और नवीन** है |

**III. निम्नलिखित प्रश्नों के उत्तर दो -तीन वाक्यों मे लिखिए : 8 x 2 = 16**

9) कश्मीरी सेब पाठ में प्रेमचंद जी ने गाजर के बारे में क्या बताया है ?

उत्तर :गाजर भी पहले गरीबों की पेट भरने की चीज थी। अमीर लोग तो उसका हलवा ही खाते थे ; मगर अब पता चला है कि गाजर में भी बहुत विटामिन है ;इसलिए गाजर को भी मेजों पर स्थान मिलने लगा है।

10) जलालुद्दीन ने अब्दुल कलाम को किसके बारे में बताते थे ?

**उत्तर :** जलालुद्दीन ने अब्दुल कलाम को शिक्षित व्यक्तियों, वैज्ञानिक खोजों, समकालिन साहित्य और चिकित्सा विज्ञान की उपलब्धियों के बारे में बताते रहते थे |

11)' बालशक्ति ' की टोली ने गाँव को "आदर्श गाँव " कैसे बनाया ?

**उत्तर :**' बालशक्ति ' की टोली ने गाँव के गड्डों को मिट्टी से भरा | गाँव का कूडा डालने के लिए एक निश्चित जगह बनाकर वहीं कूडा डालने के लिए सबको बताये | गाँव को हरा-भरा रखने के लिए चारों तरफ पेड-पौधे लगाए | इस तरह ' बालशक्ति ' की टोली ने गाँव को आदर्श गाँव बनाया|

12) यशोदा कृष्ण के क्रोध को कैसे शांत करती है ?

**उत्तर :** कृष्ण के क्रोधयुक्त मुख को देखकर और उसकी बातों को सुनकर यशोदा खुश हो जाती है|वह कहती है कि- हे कृष्ण ! सुनो | बलराम जन्म से ही चुगलाखोर है |मैं गोधन की कसम खाकर कहती हूँ , मैं ही तेरी माता और तुम मेरे पुत्र हो |

13) मछली ने दोस्तों के प्रश्न का क्या जवाब दिया ?

**उत्तर** : मछली ने दोस्तों के प्रश्न का जवाब इस तरह दिया कि -" आप लोग जरा मेरी पीठ की पट्टियाँ ध्यान से देख लो | फिर पेडों से बहुत-सी पत्तियाँ तोड लो | इन पत्तियों को छप्पर पर उसी तरह जमा दो, जैसी मेरी पीठ पर पट्टियाँ है |

14) दिनकर जी के अनुसार मानव का सही परिचय क्या है ?

**उत्तर** : दिनकर जी के अनुसार प्रकृति पर विजय प्राप्त करना मनुष्य की साधना नही है। मानव-मानव के बीच स्नेह का बाँध बाँधना मानव की सिद्धी है । जो मानव दूसरे मानव से प्रेम का रिस्ता जोडकर आपस की दूरी मिटाये, वही मानव कहलाने का अधिकारी होगा । यही मानव का सही परिचय है |

15) शनि एक अत्यंत ठंडा ग्रह है ।

**उत्तर** : शनि ग्रह सूर्य से पृथ्वी की अपेक्षा करीब दस गुना अधिक दूर है , इसलिए बहुत कम सूर्यताप उस ग्रह पर पहुँचता है - पृत्वी का मात्र सौवाँ हिस्सा | इसलिए शनि के वायुमंडल शून्य के नीचे 150 सेंटीग्रे के आसपास रहता है | इसलिए शनि एक अत्यंत ठंडा ग्रह है | ( ಮುಂದುವರೆಯುವುದು ----)

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಹೆಚ್.ತುಕಾರಾಮ್ ನಾಯ್ಕ, ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಗಿಮಾವಿನಹಳ್ಳಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ




**ಮೈಕ್ರೋ ನ್ಯೂಸ್**

## ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಗೆ ಅರ್ಜಿ ಅಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

2024–25ನೇ ಸಾಲಿನಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ನಿಮಿತ್ತ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಮಹಿಳೆಯರಿಗೆ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ನೀಡಲು ಅರ್ಜಿ ಅಹ್ವಾನಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಎಸ್.ಶ್ವೇತಾ ತಿಳಿಸಿದ್ದಾರೆ.

ಮಹಿಳೆಯರನ್ನು ಸಮಾಜದ ಮುಖ್ಯ ವಾಹಿನಿಯಲ್ಲಿ ಪ್ರತಿಬಿಂಬಿಸಲು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯಂದು ಇಲಾಖೆಯಿಂದ ಪ್ರತಿ ವರ್ಷ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಅರ್ಹ ಸಂಸ್ಥೆಗಳಿಗೆ ಮತ್ತು ವ್ಯಕ್ತಿಗಳನ್ನೊಳಗೊಂಡಂತೆ ಕ್ರೀಡೆ, ಸಾಹಿತ್ಯ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಮಹಿಳೆಯರು ಹಾಗೂ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ಆತ್ಮಸ್ಥೈರ್ಯದಿಂದ ಹೋರಾಡಿ ಜೀವ ರಕ್ಷಣೆ ಮಾಡಿರುವಂತಹ ಮಹಿಳೆಯರು ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಆಯಾ ತಾಲೂಕು ಮಟ್ಟದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಗಳಲ್ಲಿ ಪಡೆದು ಅರ್ಜಿ ಪಡೆದು ದಾಖಲೆಗಳೊಂದಿಗೆ ಫೆ.14 ರೊಳಗಾಗಿ ಉಪನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಜಯನಗರ ಕಚೇರಿಗೆ ಸಲ್ಲಿಸಬಹುದಾಗಿದೆ.

### ರಾಷ್ಟ್ರೀಯ ರಸ್ತೆ ಸುರಕ್ಷತೆ ಮಾಸಾಚರಣೆಯ ಕಾಲ್ನಡಿಗೆ ಜಾಥಕ್ಕೆ ಚಾಲನೆ

# ನೂರರ ವೇಗ 108ರ ಅತಿಥಿ

### ವೇಗವನ್ನು ತಗ್ಗಿಸಿ, ಜೀವವನ್ನು ಉಳಿಸಿ | ಸಂಚಾರಿ ಪೊಲೀಸರು ನಿಮ್ಮ ಜೀವ ರಕ್ಷಕರು



**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಪ್ರಾದೇಶಿಕ ಸಾರಿಗೆ ಕಛೇರಿ, ಶ್ರೀ ಗವಿಸಿದ್ದೇಶ್ವರ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ ಹಾಗೂ ಸರಕಾರಿ ಪದವಿಪೂರ್ವ ಕಾಲೇಜು ಇವರ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ರಸ್ತೆ ಸುರಕ್ಷತೆ ಮಾಸಾಚರಣೆ–2025ರ ಪ್ರಯುಕ್ತ ಕೊಪ್ಪಳ ನಗರದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾಲ್ನಡಿಗೆ ಜಾಥಕ್ಕೆ ಕೊಪ್ಪಳ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ ರಾಮ್ ಎಲ್ ಅರಸಿದ್ಧಿ ಹಾಗೂ ಕಲಬುರಗಿ ವಿಭಾಗದ ಜಂಟಿ ಸಾರಿಗೆ ಆಯುಕ್ತರಾದ ಸಿದ್ದಪ್ಪ ಹೆಚ್ ಕಲ್ಲೇರ್ ಅವರು ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಕೊಪ್ಪಳ ಪ್ರಾದೇಶಿಕ ಸಾರಿಗೆ ಅಧಿಕಾರಿ ಕೆ.ದಾಮೋದರ್, ಪ್ರಾದೇಶಿಕ ಸಾರಿಗೆ ಇಲಾಖೆಯ ಹಿರಿಯ ಮೋಟಾರು ವಾಹನ ನಿರೀಕ್ಷಕರಾದ ಮಂಜುನಾಥ ಪ್ರಸಾದ್ ಹಾಗೂ ಡಿ.ಹೆಚ್.ವಿಜಯಕುಮಾರ,



ಮೋಟಾರು ವಾಹನ ನಿರೀಕ್ಷಕ ವಿಜೇಂದ್ರ ಢವಳಗಿ ಸೇರಿದಂತೆ ಕಚೇರಿಯ ಸಿಬ್ಬಂದಿ, ಎನ್.ಸಿ.ಸಿ ಹಾಗೂ ಕಾಲೇಜು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

**ಕಾಲ್ನಡಿಗೆ ಮೂಲಕ ಜಾಗೃತಿ:** ಕೊಪ್ಪಳ ನಗರದ ಅಶೋಕ ವೃತ್ತದಿಂದ ಶ್ರೀ ಗವಿಸಿದ್ದೇಶ್ವರ ಮಠದ ವರೆಗೆ ನಡೆದ ಕಾಲ್ನಡಿಗೆ ಜಾಥದಲ್ಲಿ ವಾಹನ ಸವಾರರು ಸಂಚಾರಿ ನಿಯಮಗಳನ್ನು ತಿಳಿದುಕೊಳ್ಳಿ, ಸಂಚಾರಿ ನಿಯಮಗಳನ್ನು ತಪ್ಪದೇ ಪಾಲಿಸಿ, ವಾಹನದ ಕನ್ನಡಿಗಳು ನಮ್ಮ ಮೂರನೇಯ ಕಣ್ಣು, ರಸ್ತೆ ತಿರುವುಗಳಲ್ಲಿ ಹಾರ್ನ್ ಮಾಡಿ, ವಿಮೆ ಮಾಡಿಸದೇ ವಾಹನ ಬಳಸಬೇಡಿ, ಆಗ ಬಹುದು ವೇಗದ ಚಾಲನೆ ನಿಮ್ಮ ಅಂತಿಮ ಚಾಲನೆ, 'ವೇಗವನ್ನು ಕೊಲ್ಲಿರಿ, ಮುಗ್ದ ಜೀವಿಗಳು & ನಿಮ್ಮ ಜೀವನವನ್ನಲ್ಲ', 'ಸೀಟ್ ಬೆಲ್ಟ್ ಧರಿಸಿ, ಇದುವೇ ಜೀವ, ಇದುವೇ ನಿಮಯ', '100 ರಲ್ಲಿ ಹೋಗಬೇಡಿ 108ರಲ್ಲಿ ಬರಬೇಡಿ, 'ಅಗತ್ಯ ಸಂದರ್ಭದಲ್ಲಿ ವೇಗವನ್ನು ತಗ್ಗಿಸಿ, ಜೀವವನ್ನು ಉಳಿಸಿ', ಸಂಚಾರಿ ಪೊಲೀಸರು ನಿಮ್ಮ ಜೀವ ರಕ್ಷಕರು, ಎಡಬದಿಯಿಂದ ಓರ್‌ಟೇಕ್ ಮಾಡಬೇಡಿ, ಹೀಗೆ ವಿವಿಧ ಜಾಗೃತಿ ಫಲಕಗಳನ್ನು ಹಿಡಿದು, ಘೋಷಣೆಗಳನ್ನು ಕೂಗುತ್ತಾ, ಅಧಿಕಾರಿಗಳು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ರಸ್ತೆ ಸುರಕ್ಷತೆ ಬಗ್ಗೆ ಜಾಗೃತಿ ಮೂಡಿಸಿದರು.

## ಫೆ.11 ರಂದು ಅಂಬೇಡ್ಕರ್ ಓದು ಕಾರ್ಯಕ್ರಮ

**ಹಂಪಿ ಟೈಮ್ಸ್ ಬಳ್ಳಾರಿ**

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್‌ರವರ ಬದುಕು ಮತ್ತು ಸಾಧನೆಗಳ ಪರಿಚಯ ಕುರಿತು ಫೆ.11 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಶ್ರೀಮತಿ ಅಲ್ಲಂ ಸುಮಂಗಳಮ್ಮ ಸ್ಮಾರಕ ಮಹಿಳಾ ಪದವಿ ಪೂರ್ವ ಕಾಲೇಜು ಸಭಾಂಗಣದಲ್ಲಿ "ಅಂಬೇಡ್ಕರ್ ಓದು" ಎಂಬ ಕಾರ್ಯಕ್ರಮ ಆಯೋಜಿಸಲಾಗಿದೆ.



ಸಾಹಿತಿ ಹಾಗೂ ಬಾಬು ಜಗಜೀವನ್ ರಾಂ ಪ್ರಶಸ್ತಿ ಪುರಸ್ಕೃತರಾದ ಎನ್.ಡಿ. ವೆಂಕಮ್ಮ ಅವರು ಕಾರ್ಯಕ್ರಮ ಉದ್ಘಾಟಿಸುವರು.

ಶ್ರೀಮತಿ ಅಲ್ಲಂ ಸುಮಂಗಳಮ್ಮ ಸ್ಮಾರಕ ಮಹಿಳಾ ಪದವಿ ಪೂರ್ವ ಕಾಲೇಜು ಆಡಳಿತ ಮಂಡಳಿಯ ಅಧ್ಯಕ್ಷರಾದ ಎಂ.ಕಾತ್ಯಾಯಿನಿ ಮರಿದೇ ವಯ್ಯ ಅವರು ಅಧ್ಯಕ್ಷತೆ ವಹಿಸುವರು.

ಶ್ರೀಮತಿ ಅಲ್ಲಂ ಸುಮಂಗಳಮ್ಮ ಸ್ಮಾರಕ ಮಹಿಳಾ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಾದ ಡಾ.ಬಿ. ಗೋವಿಂದ ರಾಜ, ಸೇಂಟ್ ಜಾನ್ಸ್ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಾದ ಹೆಚ್. ಎಸ್.ಶಿವರಾಂ, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಾದ ಸುಲೇಖಾ.ಬಿ., ಸರ್ಕಾರಿ (ಮಾಜಿ ಪುರಸಭೆ) ಸಂಯುಕ್ತ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಾದ ಪಿ.ನಾಗೇಶ್ವರ ರಾವ್, ವಾರ್ಡ್ಲಾ ಸಂಯುಕ್ತ ಪದವಿ ಪೂರ್ವ ಕಾಲೇಜು ಪ್ರಾಂಶು ಪಾಲರಾದ ವಿಕ್ಟರ್ ಇಮ್ಯಾನು ವೇಲ್ ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಶ್ರೀ ಸತ್ಯಂ ಶಿಕ್ಷಣ ಮಹಾವಿದ್ಯಾಲಯ ಸಹಾಯಕ ಪ್ರಾಧ್ಯಾಪಕರಾದ ಅಲಂಭಾಷ ಅವರು ವಿಶೇಷ ಉಪನ್ಯಾಸ ನೀಡುವರು. ಇಬ್ರಾಹಿಂಪುರದ ಹುಲುಗಪ್ಪ ಎಸ್.ಎಂ ತಂಡದಿಂದ ಜಾನಪದ ಸಂಗೀತ ಪ್ರಸ್ತುತ ಪಡಿಸುವರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಂದ ಪ್ರಬಂಧ, ರಸಪ್ರಶ್ನೆ, ಆಶುಭಾಷಣ, ಕವನ ವಾಚನ, ಸ್ಪರ್ಧೆಗಳಲ್ಲಿ ವಿಜೇತರಿಗೆ ಪುಸ್ತಕ ರೂಪದಲ್ಲಿ ಬಹುಮಾನ ವಿತರಣೆ ಮಾಡಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ತಿಳಿಸಿದ್ದಾರೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ

BOOK YOUR ADS REACH MORE READERS
HAMPI TIMES
PRINT & DIGITAL
DAILY NEWS PAPER



BOOK NOW
94486 33038
Email: hampitimes@gmail.com

Book All Types of legal /Public Notice Display Ads
IN NEWSPAPER @ AFFORDABLE PRICE
Property Purchase Notice - Lost & Found Notice -
Summons Notice - Tender/E-Tender Notice - E-Auction Notice Etc..